
ತಿಂಗಳ ಪತ್ರಿಕೆ ಸಂಪುಟ : ೨ ಸಂಚಿಕೆ : ೩



# ಮಾನಸ


ಸಂಪುಟ : ೨ ಸಂಚಿಕೆ : ೩
ಮಾರ್ಚ್ ೧೯೮೯



**ವಿಳಾಸ "ಮಾನಸ ತಿಂಗಳ ಪತ್ರಿಕೆ"**
ಪಂಚಾಯತಿ ರಸ್ತೆ
ಕಾಡುಗೋಡಿ ( ಪೋ )
ಬೆಂಗಳೂರು—**560-067.**

**ಸೂಚನೆ :** ವಾರ್ಷಿಕ ಚಂದಾ : **15**ರೂ
ಆಜೀವ ಚಂದಾ **250** ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ........



# ಸಂಪಾದಕೀಯ


ನಮ್ಮೆಲ್ಲರನ್ನು ಆಘಾತಗೊಳಿಸುವ ಸುದ್ದಿ ಮೊನ್ನೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಮ್ಮ ದೇಹದ ಮೇಲಿನ ಹಕ್ಕನ್ನು ನಾವು ತೀರ್ಮಾನಿಸಿಕೊಳ್ಳಬೇಕು, ತಾಯ್ತನ ಇತ್ಯಾದಿಗಳ ಆಯ್ಕೆ ನಮ್ಮದಾಗಿರಬೇಕು — ಹೀಗೆ ಮಹಿಳಾ ಚಳುವಳಿಯಲ್ಲಿ ನಾವು ಧ್ವನಿ ಎತ್ತುತ್ತಿರುವಾಗಲೇ ಆರ್.ಎಚ್. ನೆಗೆಟಿವ್ ಲಸಿಕೆಯ ಬಗ್ಗೆ ಬಂದ ವರದಿಗಳು ಗಾಬರಿ ಹುಟ್ಟಿಸುವಂತಹವುಗಳು. ಸರ್ಕಾರದ ಅಲಕ್ಷ್ಯ, ವಿಜ್ಞಾನದ ಜ್ಞಾನ ಪರಿಕರಗಳು ಮಹಿಳೆಯರನ್ನು ಗಿನಿಪಿಗ್ಸ್ ಆಗಿ ಉಪಯೋಗಿಸಿಕೊಳ್ಳುತ್ತಿರುವಂತಹ ಈ ಸಂದರ್ಭದಲ್ಲಿ ಆರ್. ಎಚ್. ನೆಗೆಟಿವ್ ಗುಂಪಿನ ರಕ್ತ ಹೊಂದಿದ ಸ್ತ್ರೀಯರು ಪ್ರಥಮಬಾರಿಗೆ ಗರ್ಭ ಧರಿಸಿದಾಗ ಅಥವಾ ಗರ್ಭಪಾತವಾದಲ್ಲಿ ನೀಡುವ ಲಸಿಕೆಗಳಲ್ಲಿ ಏಯ್‌ಡ್ಸ್ ರೋಗವಿರುವುದು ಪತ್ತೆಯಾಗಿದೆ. ಈ ವಿಚಾರ ಆ ರಕ್ತದ ಗುಂಪಿನ ಮಹಿಳೆಯರ ಜೀವದ ಅಳಿವು - ಉಳಿವಿನ ಪ್ರಶ್ನೆಯಾಗಿದೆ.

ನಮ್ಮ ದೇಶದ ಕಂಪನಿಗಳಲ್ಲೇ ತಯಾರಾದ ಈ ಕೆಲವು ಲಸಿಕೆಗಳಲ್ಲಿ ಎಚ್.ಐ.ವಿ. – ಏಯ್‌ಡ್ಸ್‌ನ ರೋಗಾಣುಗಳಿರುವುದು ಪತ್ತೆಯಾಗಿ, ಮಹಾರಾಷ್ಟ್ರ ಸರ್ಕಾರ ಇವುಗಳನ್ನು ನಿಷೇಧಿಸಿದ್ದಾಗ್ಯೂ ನಮ್ಮ ರಾಜ್ಯದ ಆರೋಗ್ಯ ಇಲಾಖೆ ನಮ್ಮ ಮಹಿಳೆಯರ ಬದುಕು - ಸಾವಿನೊಂದಿಗೆ ಕಣ್ಣು ಮುಚ್ಚಾಲೆ ಆಟ ಆಡುತ್ತಿದೆ. ಸಂರಕ್ಷಿಸಬೇಕಾದ ಸರ್ಕಾರವೇ ಹೀಗೆ ಮಹಿಳೆಯರ ಆರೋಗ್ಯದ ಜೊತೆ ಆಟ ಆಡಿದರೆ, ವೈದ್ಯಕೀಯವೇ ಮಹಿಳೆಯರ ಪಾಲಿಗೆ ಉರುಳಾದರೆ ಮಹಿಳೆಯರು ನ್ಯಾಯಕ್ಕಾಗಿ ಯಾವ ಕಾನೂನು ಕಟ್ಟೆ ಹತ್ತಬೇಕು ? ಯಾರಲ್ಲಿ ವಿರೋಧ ತೋರಿಸಬೇಕು ?

ಇದು ಬಗೆಹರಿಯದ ಪ್ರಶ್ನೆ. ಮುಖ್ಯವಾಗಿ ನಾವೇ ಎಚ್ಚರದಿಂದಿರಬೇಕು. ಹೆರಿಗೆ, ಬಾಣಂತನ, ಕುಟುಂಬ ಯೋಜನೆ ಇತ್ಯಾದಿ ಲೈಂಗಿತೆಗೆ ಸಂಬಂಧಪಟ್ಟ ವಿಚಾರದಲ್ಲಿ ನಾವು ಸದಾ ಜಾಗರೂಕರಾಗಿರಬೇಕಾಗಿದೆ. ಫೆಮಿನಿಸ್ಟ್ ನೆಟ್ ವರ್ಕ್ ಈ ವಿಚಾರದಲ್ಲಿ ಶೀಘ್ರವಾಗಿ ಪ್ರಾರಂಭಿಸಿದ್ದು ಈ ಅನಾಹುತಕ್ಕೆ ಬಲಿಯಾಗುವ ಮಹಿಳೆಯರ ಸಂಖ್ಯೆಯನ್ನು ಕಡಿಮೆಗೊಳಿಸಬಹುದು. ಮಹಿಳಾ ವಿಜ್ಞಾನಿಗಳು, ಡಾಕ್ಟರ್‌ಗಳು ಮಹಿಳೆಯರಿಗೆ ಅನುಕೂಲವಾಗುವಂತಹ ವೈದ್ಯಕೀಯ ಜ್ಞಾನದತ್ತ ತುರ್ತಾಗಿ ಗಮನ ಹರಿಸಬೇಕು. ನಮ್ಮ ನಮ್ಮಲ್ಲೇ ಮುಕ್ತವಾಗಿ ಚರ್ಚಿಸಿ ಈ ವಿಚಾರಗಳಲ್ಲಿ ಸಾಕಷ್ಟು ಅರಿವು ಹೊಂದುವ ಅಗತ್ಯವನ್ನು ನಾವಿಂದು ಗಂಭೀರವಾಗಿ ಪರಿಗಣಿಸಬೇಕಾಗಿದೆ.

# ಸತಿ ಆಚರಣೆಯ ಇತಿಹಾಸ

**20ನೇ ಶತಮಾನದ ಅಂತಿಮ ಘಟ್ಟದಲ್ಲಿರುವ ನಾವು 150 ವರ್ಷದ ಹಿಂದೆ ಬಹಿಷ್ಕರಿಸಲ್ಪಟ್ಟ ಸತಿ ಪದ್ಧತಿಯ ಬಗ್ಗೆ ಇಂದು ಮತ್ತೆ ಗಂಭೀರ ವಾಗಿ ಯೋಚಿಸಬೇಕಾದಂತಹ ಸ್ಥಿತಿ ಒದಗಿದೆ. ಸತಿ ಪದ್ಧತಿಯ ಧರ್ಮ, ಕಾನೂನು, ಸಾಮಾಜಿಕ ನಡಾವಳಿಗಳ ಬಗ್ಗೆ ಐತಿಹಾಸಿಕವಾಗಿ ಗುರುತಿಸಿ, ಅಧ್ಯಯನ ನಡೆಸಿದ ಸಿ. ಜಿ. ಮಂಜುಳಾರವರು ಸತಿ ಪದ್ಧತಿಯ ಇಂದಿನ ಸ್ವರೂಪವನ್ನು ಅರ್ಥಪೂರ್ಣವಾಗಿ ಈ ಲೇಖನದಲ್ಲಿ ವಿವರಿಸುತ್ತಾರೆ.**



೪ ಸೆಪ್ಟೆಂಬರ್ ೧೯೮೭ — ಅಂದು ರಾಜಸ್ತಾನದ ದಿಯೊರಾಲ ಗ್ರಾಮದಲ್ಲಿ ೧೮ ವರ್ಷದ ಯುವತಿ ರೂಪ್ ಕನ್ವರ್ ಪತಿಯ ಚಿತೆಯಲ್ಲಿ ದಹಿಸಿಹೋದಳು. ಲಕ್ಷಾಂತರ ಜನರ ಕಣ್ಣೆದುರಿನಲ್ಲೇ ಈ ಕ್ರಿಯೆ ನಡೆಯಿತು.

ಭಾರತದಲ್ಲಿ ಸತಿ ಪದ್ಧತಿ ಬಹಿಷ್ಕರಿಸಿ ಈಗಾಗಲೆ ೧೫೦ ವರ್ಷಗಳಾಗಿ ಹೋಗಿವೆ, ಪುನಃ ಸತಿ ವಿರುದ್ಧದ ನಿಲುವು ಸರಿ ಅಥವಾ ತಪ್ಪು ಎಂದು ಚರ್ಚಿಸಬೇಕಾಗಿರುವಂಥ ವಿಚಿತ್ರ ಸನ್ನಿವೇಶದಲ್ಲಿ ನಾವಿಂದು ಸಿಲುಕಿದ್ದೇವೆ.

ಇಲ್ಲಿ ಹೆಣ್ಣೊಬ್ಬಳ ಜೀವಂತ ದಹನ, ಯುವ ವಿಧವೆಯೊಬ್ಬಳ ಕೊಲೆ ಮುಖ್ಯ ಪ್ರಶ್ನೆಯಲ್ಲ, ಸತಿ ಪದ್ಧತಿಯ ಪರ–ವಿರೋಧ ವಾದಗಳಲ್ಲಿ ಇದು ಗೌಣ. ಪರಂಪರೆಯ ಪಾವಿತ್ರ್ಯ, ಧಾರ್ಮಿಕ ಸ್ವಾತಂತ್ರ್ಯದಂಥ ಅಮೂರ್ತ ವಿಚಾರಗಳು ಈಗ ನಡೆಯುತ್ತಿರುವ ವಾದ ವಿವಾದಗಳ ಕೇಂದ್ರ ಬಿಂದುವಾಗುತ್ತಿರುವುದು ದುರಂತ.

ಧಾರ್ಮಿಕ ಸ್ವಾತಂತ್ರ್ಯದ ಸಂವಿಧಾನಾತ್ಮಕ ಹಕ್ಕು ಹೆಣ್ಣಿನ ಮೂಲಭೂತ ಹಕ್ಕಾದ ಸಮಾನತೆ ವಿರೋಧಿಯಾಗಿ ಮಾರ್ಪಡಬಹುದೆ? ಧಾರ್ಮಿಕ ಗ್ರಂಥಗಳ ನಿಯಮಗಳು ನಮ್ಮ ನೈತಿಕ, ನ್ಯಾಯಾಂಗ ನೀತಿಯನ್ನು ಯಾವಾಗಲೂ ನಿಯಂತ್ರಿಸಬಹುದೆ? ಹಾಗಿದ್ದಲ್ಲಿ ಬಹುಪತ್ನಿತ್ವ, ಬಾಲ್ಯವಿವಾಹದಂತಹ ಪದ್ಧತಿಗಳು ಪುನಃ ಚಾಲನೆ ಪಡೆಯಬೇಕೆ? ವಿಧವಾ ಮರುವಿವಾಹ ಕಾಯ್ದೆ ಕಿತ್ತೊಗೆಯಬೇಕೆ? — ಈ ಪ್ರಶ್ನೆಗಳು ಈಗ ಹೆಚ್ಚು ಪ್ರಸ್ತುತವಾಗಬೇಕಿವೆ.

ಈವರೆಗೆ ಭಾರತದ ಮಹಿಳೆಯರ ಬದುಕನ್ನು

---

ಮಂಜುಳಾ ಸಿ.ಜಿ.

---

ಧಾರ್ಮಿಕ, ಕಾನೂನು ವಿಚಾರಗಳು ನಿಯಂತ್ರಿಸಿವೆ. ಇವು ಸಾಮಾಜಿಕ ನಡಾವಳಿ ನಿರ್ಧರಿಸುವ ಪ್ರಬಲ ಶಕ್ತಿಗಳಾಗಿವೆ. ಜಾತ್ಯಾತೀತ ರಾಷ್ಟ್ರ ನಿರ್ಮಾಣಕ್ಕೆ ೪೦ ವರ್ಷಗಳಿಂದ ನಡೆಸಿರುವ ಸತತ ಪ್ರಯತ್ನದಿಂದಲೂ ಇದನ್ನು ಕಿತ್ತೊಗೆಯಲಾಗಿಲ್ಲ ಅಥವಾ ಧಾರ್ಮಿಕ ಹಿಡಿತ ತಪ್ಪಿಸುವ ಪರ್ಯಾಯ ಸಿದ್ಧಾಂತ ರೂಪಿಸುವುದೂ ಸಾಧ್ಯವಾಗಿಲ್ಲ.

ಧರ್ಮವೊಂದು ನೆವ. ಕ್ರೌರ್ಯದ ಪರಮಾವಧಿ

ಯಾದ "ಸತಿ" ಯಂತಹ ಬರ್ಬರ ಅಪರಾಧವನ್ನೂ ತರ್ಕಕ್ಕೆ ಒಳಪಡಿಸಿ ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಧರ್ಮ ಅವಕಾಶ ನೀಡುತ್ತದೆ ಎಂಬುದು ಎಲ್ಲ ರಾಜಕಾರಣಿಗಳಿಗೆ, ಮೂಲಭೂತವಾದಿಗಳಿಗೆ, ಸಂಪ್ರದಾಯವಾದಿಗಳಿಗೆ ಅರಿವಿದೆ.

ಮಹಿಳೆಯ ಪರವಾಗಿ ಸಾಂಕೇತಿಕ ಕಾಯಿದೆಗಳನ್ನು ಸರಕಾರ ರೂಪಿಸಿದರೂ, ಇದರ ಸಕಲ ಸಂಬಂಧಗಳೂ ಪಿತೃಪ್ರಧಾನ ವ್ಯವಸ್ಥೆ ಹಾಗೂ ಮೂಲಭೂತ ಶಕ್ತಿಗಳೊಡನೆ ಎಂಬುದನ್ನು ಮರೆಯಬಾರದು. ಭ್ರಷ್ಟವಾದ ಜಾತ್ಯಾತೀತ ವ್ಯವಸ್ಥೆ ಸ್ವಹಿತಾಸಕ್ತಿ ಕಾಪಾಡುವ ಮೂಲಭೂತವಾದಿತನಕ್ಕೆ ನಾಂದಿ ಹಾಡುತ್ತದೆ.

ರೂಪ್ ಕನ್ವರ್ ಮತ್ತು ಈ ಹಿಂದೆ ನಡೆದ ಷಾಬಾನು ಪ್ರಕರಣ - ಕೇವಲ ಇಬ್ಬರು ಮಹಿಳೆಯರ ವಿಶಿಷ್ಟ ವೈಯಕ್ತಿಕ ದುರಂತಗಳಲ್ಲ. ರಾಷ್ಟ್ರ – ಸಮಾಜ

> ಇಲ್ಲಿ ಹೆಣ್ಣೊಬ್ಬಳ ಜೀವಂತ ದಹನ, ಯುವ ವಿಧವೆಯೊಬ್ಬಳ ಕೊಲೆ ಮುಖ್ಯ ಪ್ರಶ್ನೆಯಲ್ಲ, ಸತಿ - ಪದ್ಧತಿಯ ಪರ - ವಿರೋಧ ವಾದಗಳಲ್ಲಿ ಇದು ಗೌಣ. ಪರಂಪರೆಯ ಪಾವಿತ್ರ್ಯ' ಧಾರ್ಮಿಕ ಸ್ವಾತಂತ್ರ್ಯದಂತಹ ಅಮೂರ್ತ ವಿಚಾರಗಳು ಈಗ ನಡೆಯುತ್ತಿರುವ ವಾದ - ವಿವಾದಗಳ ಕೇಂದ್ರ ಬಿಂದುವಾಗುತ್ತಿರುವುದು ದುರಂತ.

ಸಮುದಾಯ - ವ್ಯಕ್ತಿ, ಧರ್ಮ - ಕಾನೂನು, ಮೂಲಭೂತ ಹಕ್ಕು - ಸ್ವಾತಂತ್ರ್ಯ, ಪರಂಪರೆ - ಆಧುನಿಕತೆ, ಜಾತ್ಯಾತೀತತೆ - ಅಂಧಶ್ರದ್ಧೆ, ರಾಜಕಾರಣ - ರಾಜತಂತ್ರ ಹೀಗೆ ವಿವಿಧ ಪರ – ವಿರೋಧಿ ಶಕ್ತಿಗಳ ನಾಟಕೀಯ ಮುಖಾ ಮುಖಿಗೆ ಕಾರಣವಾಗಿದೆ. ಸಮಾಜದ ದುರ್ಬಲ ವರ್ಗಗಳ ವಿರುದ್ಧ ಆಳದಲ್ಲಿ ಬೇರುಬಿಟ್ಟಿರುವ ನೈತಿಕ ಅಧಃಪತನದ ಸಾಮಾಜಿಕ ಧೋರಣೆಗಳ ಸಂಕೇತವಾಗಿದೆ.

ನಮ್ಮ ಸಂಸ್ಕೃತಿಯಲ್ಲಿ ಸತಿ ಆಚರಣೆ ಹಿನ್ನೆಲೆಯ ಇತಿಹಾಸದ ಅಧ್ಯಯನ ಇಳಿಮುಖವಾಗುತ್ತಾ ಮಹಿಳೆಯ ಸಾಮಾಜಿಕ ಸ್ಥಾನಮಾನವನ್ನೂ ಸೂಚಿಸುತ್ತದೆ.

**ಪುರಾಣ ಕಥೆಗಳು :–** ಪತಿಗಾಗಿ ತನ್ನ ಜೀವವನ್ನೇ ಬಲಿಗೊಡುವ ಹೆಣ್ಣನ್ನು ನಮ್ಮ ಪುರಾಣಗಳ ಸತಿ ಕಥೆಗಳು ಆದರ್ಶೀಕರಿಸಿ ಅಮರವಾಗಿಸುತ್ತವೆ. ಪತಿಯ ಚಿತೆಯ ಮೇಲೆ ಜೀವಂತ ದಹನವಾಗುವ "ಸತಿ" ಆಚರಣೆಯದೇ ಚಿತ್ರಣವೇನೂ ಇಲ್ಲಿಲ್ಲ.

ಉದಾಹರಣೆಗೆ ಶಿವನನ್ನು ವಿವಾಹವಾಗಿದ್ದ ಪ್ರಜಾಪತಿ ದಕ್ಷನ ಮಗಳು ಸತಿಯ ಕಥೆ. ಮೂಳೆ ಬುರುಡೆಗಳ ಮಾಲೆ ಧರಿಸಿದ ಅಳಿಯನನ್ನು ಕಂಡರೆ ಸತಿಯ ತಂದೆಗೆ ತಿರಸ್ಕಾರ. ಒಮ್ಮೆ ಯಜ್ಞ ಮಾಡುವಾಗ ಸತಿ ಶಿವರನ್ನು ರಾಜ ದಕ್ಷ ಆಹ್ವಾನಿಸಲಿಲ್ಲ. ತನ್ನ ಸೋದರಿಯರು, ಅವರ ಪತಿಯರು ಈ ಯಜ್ಞಕ್ಕೆ ಹೋಗುತ್ತಿದ್ದಾರೆಂಬುದು ಸತಿಗೆ ತಿಳಿಯಿತು. ತವರ ಹಂಬಲದಿಂದ ಯಜ್ಞಕ್ಕೆ ಹೋದಳು. ಶಿವನನ್ನು ಬಿಟ್ಟು ಎಲ್ಲ ದೇವರಿಗೂ ನೀಡಿರುವ ಗೌರವ ಸ್ಥಾನಗಳು, ಹಾಗೂ ತನಗೆ ತೋರಲಾದ ಅನಾದರದಿಂದ ದಿಗ್ಭ್ರಮೆಗೊಂಡಳು. ವಾದ ವಿವಾದದ ನಂತರ ಶಿವನನ್ನು ಧ್ಯಾನಿಸುವ ಆಕೆಯನ್ನು ಯೋಗದ ಅಗ್ನಿ ಸುಟ್ಟು ಬೂದಿ ಮಾಡುತ್ತದೆ. ಪತಿನಿಷ್ಠೆ ಬಗೆಗಿನ ದೈವಿಕ ಉದಾಹರಣೆಯಿದು.

ಸತಿ ಸಾಮಾಜಿಕ ಆಚರಣೆಯ ಮೂಲ ವಿಚಾರ ಇನ್ನೂ ಗೊಂದಲಮಯವೇ. ಇದು ಭಾರತಕ್ಕೆ ಮಾತ್ರವೇ ವಿಶಿಷ್ಟವಾಗಿರಲಿಲ್ಲ ಎಂಬುದಕ್ಕೆ ವಿಪುಲ ಪುರಾವೆಗಳಿವೆ ಎನ್ನುತ್ತಾರೆ ಇತಿಹಾಸಕಾರರು, ಸ್ಕಾಂಡಿನೇವಿಯಾ ಗ್ರೀಸ್, ಯುರೋಪ್, ಪಶ್ಚಿಮ ಏಷ್ಯಾ, ಚೀನಾ ದೇಶಗಳಲ್ಲಿ ವಿಧವಾ ದಹನ ಚಾಲ್ತಿಯಲ್ಲಿತ್ತು. ಗ್ರೀಕ್ ಹಾಗು ಸ್ಕಿತಿಯನ್‌ನಂತಹ ಪ್ರಾಚೀನ ಸಂಸ್ಕೃತಿಗಳಲ್ಲಿ ಸತಿ ಆಚರಿಸುವುದು ಮೇಲ್ವರ್ಗದ ಸ್ಥಾನಮಾನದ ಸಂಕೇತವೂ ಆಗಿತ್ತು.

**ವೇದಕಾಲ :–** ಯಾವಾಗ, ಹೇಗೆ ಸತಿ ಪದ್ಧತಿ

> ತಾಯ್ತನ ಹೆಣ್ಣಿನ ಮೂಲಭೂತ ಅಗತ್ಯ ಎಂದು ಪರಿಗಣಿಸಲಾಗಿತ್ತು. ಗಂಡ ನಪುಂಸಕನಾಗಿದ್ದು ಮಕ್ಕಳಾಗದಿದ್ದಲ್ಲಿ ನಿಯೋಗದ ಮೂಲಕ ಬೇರೊಬ್ಬ ಪುರುಷನಿಂದ ಮಗು ಪಡೆಯುವ ಅವಕಾಶವಿತ್ತು. ಮಕ್ಕಳಿಲ್ಲದ ವಿಧವೆಯರಿಗೂ ಈ ಹಕ್ಕು ನೀಡಲಾಗಿತ್ತು.

ಆರಂಭವಾಯಿತೆಂಬುದೂ ಅಸ್ಪಷ್ಟ. ವೇದಕಾಲದ ಸ್ತ್ರೀಯ ಜೀವನ ಪತಿಯ ಜೀವನದೊಡನೇ ಬೆಸೆದುಕೊಂಡಿರಲಿಲ್ಲ. ಸಮಕಾಲೀನ ಮಹಿಳೆಗಿಂತ ಅಂದಿನ ಸ್ತ್ರೀ ಹೆಚ್ಚು ಸ್ವತಂತ್ರಳಾಗಿದ್ದಳು.

ಅಥರ್ವ ವೇದದಲ್ಲಿ ವಿಧವಾ ಪುನರ್ವಿವಾಹದ ಪ್ರಸ್ತಾಪವಿದೆ. ವಿವಾಹ ಹೆಣ್ಣನ್ನು ಕಟ್ಟುಪಾಡಿಗೆ ಒಳಪಡಿಸುವಂಥದ್ದಾಗಿರಲಿಲ್ಲ. ಧಾರ್ಮಿಕ ಆಚರಣೆಗಳಲ್ಲಿ ಪುರುಷನಷ್ಟೇ ಸಮಾನವಾಗಿ ಪಾಲ್ಗೊಳ್ಳುವ ಅವಕಾಶ ಹೆಣ್ಣಿಗಿತ್ತು ಎನ್ನುವುದು ಋಗ್ವೇದ ಅಧ್ಯಯನದಿಂದ ವ್ಯಕ್ತ. ಇಷ್ಟಪಟ್ಟಲ್ಲಿ ವಿವಾಹವಾಗದೇ ಜೀವನ ಪೂರ್ತಿ ಅಧ್ಯಯನ ನಡೆಸಿ ಬ್ರಹ್ಮವಾದಿನಿಗಳಾಗುವಲಿವಕಾಶ ಇತ್ತು.

ತಾಯ್ತನ ಹೆಣ್ಣಿನ ಮೂಲಭೂತ ಅಗತ್ಯವೆಂದು ಪರಿಗಣಿಸಲಾಗಿತ್ತು. ಗಂಡ ನಪುಂಸಕನಾಗಿದ್ದು ಮಕ್ಕಳಾಗದಿದ್ದಲ್ಲಿ ನಿಯೋಗದ ಮೂಲಕ ಬೇರೊಬ್ಬ ಪುರುಷನಿಂದ ಮಗು ಪಡೆಯುವ ಅವಕಾಶವಿತ್ತು. ಮಕ್ಕಳಿಲ್ಲದ ವಿಧವೆಯರಿಗೂ ಈ ಹಕ್ಕು ನೀಡಲಾಗಿತ್ತು.

ಆದರೆ ಅಂತಿಮ ಸಂಸ್ಕಾರ ಸನ್ನಿವೇಶದಲ್ಲಿ ವಿಧವೆಯರು ತಮ್ಮ ಪತಿಯ ಪಾರ್ಥಿವ ದೇಹದ ಬಳಿ ಮಲಗಬೇಕಿತ್ತು ಎಂಬ ಸಂಪ್ರದಾಯ ಪ್ರಚಲಿತವಿತ್ತು ಎಂಬುದನ್ನು ಋಗ್ವೇದದ ಶ್ಲೋಕದೊಂದಿಗೆ ಅಥರ್ವ ವೇದದಲ್ಲಿ ವಿವರಿಸಲಾಗಿದೆ. ಆದರೆ ಅಗ್ನಿಸ್ಪರ್ಶಕ್ಕೆ ಮುಂಚೆಯೇ ಪತಿಯ ಸೋದರ ವಿಧವೆಯ ಕೈಹಿಡಿದು ಎಬ್ಬಿಸಿ ಹೊರ ಕರೆತರುತ್ತಿದ್ದ. ವೇದಕಾಲದಲ್ಲೂ "ಸತಿ" ಆಚರಣೆ ಬಗ್ಗೆ ಅರಿವಿತ್ತು ಎಂದು ಪ್ರತಿಪಾದಿಸಲು ಇತಿಹಾಸಕಾರರು ಈ ಶ್ಲೋಕ ಉದಹರಿಸುತ್ತಾರೆ. ಆದರೆ ಇಲ್ಲಿಯ ಸತಿ ಆಚರಣೆಯ ಕ್ರಿಯೆ ಕೇವಲ ಅಣಕು ಕ್ರಿಯೆಯಷ್ಟೇ.

**ಮಹಾಭಾರತ — ಧರ್ಮಶಾಸ್ತ್ರ:** ಮಹಾಭಾರತದಲ್ಲಿ ವಿಧವೆಯರು ಸತಿಯರಾಗುವ ಉಲ್ಲೇಖವಿದೆ. ಪಾಂಡುವಿನ ಎರಡನೇ ಪತ್ನಿ ಮಾದ್ರಿ "ಸತಿ" ಯಾಗುತ್ತಾಳೆ. ಆದರೆ ಈ ಆಚರಣೆ ಕರ್ತವ್ಯವಾಗಿರಲಿಲ್ಲಿ. ಕುರುಕ್ಷೇತ್ರದ ಯುದ್ಧದಲ್ಲಿ ಮಡಿದ ದ್ರೋಣ·

---

## ಅಕ್ಷರ

ಪ್ರಸ್ತುತ ಪರಿಸ್ಥಿತಿಯಲ್ಲಿ ಮಹಿಳೆಗೆ ಹಾಗು ಪ್ರಗತಿಪರ ವಿಷಯಕ್ಕೆ ಸಂಬಂಧಪಟ್ಟ ಸಾಹಿತ್ಯ ಹಾಗು ವರದಿಗಳ ಅವಶ್ಯಕತೆ ಇದೆ. ಮಹಿಳೆಯರು ಹಾಗು ಆಸಕ್ತಿ ಉಳ್ಳವರು ಕೊಳ್ಳಲಾರದಷ್ಟು ಪುಸ್ತಕಗಳು ದುಬಾರಿಯಾಗಿವೆ. ಇರುವ ಸೌಲಭ್ಯಗಳು ಅತ್ಯಲ್ಪ ಹಾಗು ಕೈಗೆಟುಕಲಾರದವು.

ಸಾಹಿತ್ಯವನ್ನು ಹಂಚಿಕೊಳ್ಳುವುದರ ಮೂಲಕ ಹಾಗೂ ಪ್ರತಿಕ್ರಿಯೆಗಳನ್ನು ಮತ್ತು ಸಂಬಂಧಪಟ್ಟ ಅವಶ್ಯಕತೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ಇದು ಸಾಧ್ಯವಾಗಬಹುದು. ಈ ನಿಟ್ಟಿನಲ್ಲಿ ಮುಂಬಯಿಯ ಮಹಿಳೆಯರು ದುಡಿಯುವ ಪ್ರಯತ್ನ ಮಾಡಿದ್ದಾರೆ. ಈ ಹೊಸ ಪ್ರಯತ್ನದ ರೂಪವೇ 'ಅಕ್ಷರ' — ಎಂದರೆ

ಅಕ್ಷರ ಮಾಲೆಯ ಒಂದು ಅಕ್ಷರ - ಒಂದುಗೂಡಿಸಿದಾಗ ಒಂದು ಪದ.

ಅಕ್ಷರ - ಒಂದು ಪದ - ಕ್ರಮವಾಗಿ ಸಂಘಟಿಸಿದಾಗ ಅರ್ಥಪೂರ್ಣ.

ಅಕ್ಷರ - ವಿಚಾರ, ಭಾವನೆ, ಕ್ರಿಯೆಗಳ ಅಭಿವ್ಯಕ್ತಿ.

ಈ ಅರ್ಥದೊಂದಿಗೆ 'ಅಕ್ಷರ' ಗುಂಪಿನವರು ವಾಚನಾಲಯ, ಸಂಶೋಧನೆ ಹಾಗು ಪ್ರಕಾಶನವನ್ನು ಸ್ಥಾಪಿಸುವ ಅಪೇಕ್ಷೆಯನ್ನಿಟ್ಟುಕೊಂಡಿದ್ದಾರೆ. ಅಪೇಕ್ಷೆ ಅಪೇಕ್ಷೆಯಾಗೇ ಉಳಿಯದೆ ಮುಂದುವರಿಯಬೇಕಾದರೆ ಸಹಕಾರ ಹಾರೈಕೆ ಅಗತ್ಯ. ಮಹಿಳಾ ಚಳುವಳಿಯಲ್ಲಿರುವವರು, ಇಲ್ಲದವರೂ ಎಲ್ಲರೂ ಭಾಗಿಗಳಾದಲ್ಲ ಇದು ಸಾಧ್ಯ.

ಆ ಕಾರಣಕ್ಕಾಗಿ ಅಕ್ಷರದವರು ಈ ಮೂಲಕ ಎಲ್ಲರ ಸಹಾಯ ಕೋರಿದ್ದಾರೆ.

ಪುಸ್ತಕ ಮತ್ತು ಲೇಖನಗಳ ಅವಶ್ಯಕತೆ ಅಕ್ಷರಕ್ಕಿದೆ. ಬೇಡದ, ಓದದೇ ಇಟ್ಟುಕೊಂಡ ಪುಸ್ತಕಗಳನ್ನು ಕಳುಹಿಸಲು ಸಾಧ್ಯವೆ? ಅಥವಾ ನಿಮ್ಮಲ್ಲಿರುವ ಪುಸ್ತಕಗಳನ್ನು ಒಂದು ವರ್ಷದವರೆವಿಗೂ ನೀಡಿದರೆ, ಅದೇ ಸ್ಥಿತಿಯಲ್ಲಿ ಹಿಂದಿರುಗಿಸಲಾಗುವುದು.

ಪುಸ್ತಕಗಳನ್ನು ಕ್ರಮವಾಗಿ ಸಂಘಟಿಸುವುದಕ್ಕೆ, ಪ್ರಸರಣ ಮಾಡುವುದಕ್ಕೆ ಸಹಾಯ ಮಾಡಲು ಸಾಧ್ಯವೆ? ಸಹಾಯಮಾಡಲಾಗದಿದ್ದಲ್ಲಿ ನಿಮ್ಮ ನೈತಿಕ ಬೆಂಬಲ ನೀಡಿ.

ಸಹಾಯ ಮಾಡಲಿಚ್ಛಿಸುವವರು ಈ ವಿಳಾಸವನ್ನು ಸಂಪರ್ಕಿಸಿ.

ನಂದಿತಾ ಗಾಂಧಿ
ಲಕ್ಷ್ಮಿ ಮೆನನ್
ನಂದಿತಾ ಷಾ
ಗೀತಾ ಸಾಹು

ಫುಲ್‌ಚಂದ್ ನಿವಾಸ್, 19
ಚೌಪಾಟಿ ಸೀ ಫೇಸ್,
ಬಾಂಬೆ 400 007

[illegible] ಹಾಗೂ ಕುಟುಂಬ ಪ್ರಶ್ನೆಯಾಗಲಿ "ಸತಿ" ಆಚರಿಸುವುದಿಲ್ಲ.

"ಸತಿ"ಬಗ್ಗೆ ಧರ್ಮಶಾಸ್ತ್ರಗಳ ವಿವರಣೆ ವಿಭಿನ್ನವಾದುದು. ವಿಧವೆ ಪರಿಶುದ್ಧ ಜೀವನ ನಡೆಸಬೇಕು, ಮಕ್ಕಳಿಲ್ಲದಿದ್ದಲ್ಲಿ ಮಾತ್ರ ನಿಯೋಗದ ಮೂಲಕ ಒಂದು ಮಗು ಪಡೆಯಬಹುದೆಂದು ಮನುಧರ್ಮಶಾಸ್ತ್ರ ಹೇಳುತ್ತದೆ, ನಂತರದ ವಿಷ್ಣುಧರ್ಮಶಾಸ್ತ್ರ ವಿಧವೆಗೇ ಆಯ್ಕೆಯ ಅವಕಾಶ ನೀಡಿದೆ ಬ್ರಹ್ಮಚಾರಿಯಾಗಿ ಪರಿಶುದ್ಧ ಜೀವನ ನಡೆಸಬಹುದು – ಇಲ್ಲದಿದ್ದಲ್ಲಿ ಸತಿಯಾಗಬಹುದು.

ಮನುವಿನ ಪ್ರಮುಖ ವ್ಯಾಖ್ಯಾನಕಾರನಾದ ಮೇಧಾತಿತಿ, ೧೧ನೇ ಶತಮಾನದಲ್ಲಿ ಬರೆದಿರುವ ವ್ಯಾಖ್ಯಾನದಲ್ಲಿ ವಿಧವೆಯರು ಸತಿಯರಾಗುವುದನ್ನು ಖಂಡಿಸಿದ್ದಾನೆ, ಇದು ಅಧರ್ಮ, ಅಶಾಸ್ತ್ರೀಯ ಎಂದು ವಾದಿಸಿದ್ದಾನೆ. ಇದು ಆತ್ಮಹತ್ಯೆಗೆ ಸಮಾನ, ಪ್ರತಿವ್ಯಕ್ತಿಯೂ ತನ್ನ ಜೀವನವನ್ನು ಪೂರ್ಣವಾಗಿ ಬದುಕಬೇಕು. ಅಲ್ಲದೆ ಕೆಲವು ಸಂದರ್ಭಗಳಲ್ಲಿ ವಿಧವೆಗೆ ಮರುವಿವಾಹದ ಅವಕಾಶವೂ ಇರಬೇಕೆಂದೂ ಹೇಳುತ್ತಾನೆ.

---

ಮನುವಿನ ಪ್ರಮುಖ ವ್ಯಾಖ್ಯಾನಕಾರನಾದ ಮೇಧಾತಿತಿ ೧೧ನೇ ಶತಮಾನದಲ್ಲಿ ಬರೆದಿರುವ ವ್ಯಾಖ್ಯಾನದಲ್ಲಿ ವಿಧವೆಯರು ಸತಿಯರಾಗುವುದನ್ನು ಖಂಡಿಸಿದ್ದಾನೆ. ಇದು ಅಧರ್ಮ, ಅಶಾಸ್ತ್ರೀಯ ಎಂದು ವಾದಿಸಿದ್ದಾನೆ. ಇದು ಆತ್ಮಹತ್ಯೆಗೆ ಸಮಾನ, ಪ್ರತಿವ್ಯಕ್ತಿಯೂ ತನ್ನ ಜೀವನವನ್ನು ಪೂರ್ಣವಾಗಿ ಬದುಕಬೇಕು, ಅಲ್ಲದೆ ಕೆಲವು ಸಂದರ್ಭಗಳಲ್ಲಿ ವಿಧವೆಗೆ ಮರುವಿವಾಹದ ಅವಕಾಶವೂ ಇರಬೇಕೆಂದೂ ಹೇಳುತ್ತಾನ.

---

ಕಥೆಗಳ ಸಂಗ್ರಹವಾದ ಹಿತೋಪದೇಶ "ಸತಿ" ಯಾದ ಕ್ರಿಯೆಯನ್ನು ವೈಭವೀಕರಿಸುತ್ತದೆ. ಮರಣದ ನಂತರ ನಿರಂತರ ಸಹಬಾಳ್ವೆ ಸಾಧ್ಯ ಎಂಬ ಸಿದ್ಧಾಂತದಲ್ಲಿ ಸತಿಯನ್ನು ವೈಭವೀಕರಿಸಿ ಅನೇಕ ಪಾಠಗಳಲ್ಲಿ ಇದನ್ನು ಸಹಮರಣ, ಸಹಗಮನ ಹಾಗೂ ಅನುವರೋಹಣ ಎಂದು ಬಣ್ಣಿಸಲಾಗಿದೆ.

**ಪ್ರಥಮ ಐತಿಹಾಸಿಕ ಪ್ರಕರಣ:** ಭಾರತದಲ್ಲಿ ವಿಧವಾ ದಹನದ ಸಮಗ್ರ ಇತಿಹಾಸ ಸಂಗ್ರಹಿಸಿರುವ ವಿ. ಎನ್. ದತ್ತಾ ಅವರ ಪ್ರಕಾರ, ಸತಿಯ ಐತಿಹಾಸಿಕ ಘಟನೆ ಅತ್ಯಂತ ಮೊದಲು ದಾಖಲಾಗಿರುವುದು ಕ್ರಿ. ಪೂ. ೩೧೭ರಲ್ಲಿ, ಯುದ್ಧರಂಗದಲ್ಲಿ ಮಡಿದ ಯುಮೆನಿಸ್ ಸೈನ್ಯದ ಭಾರತೀಯ ತುಕಡಿಯ ಜನರಲ್ ಕೆಟಿಲಿಸ್ ಪತ್ನಿ ಅಂತಿಗ್ನೊಸ್ ಪತಿಯ ಚಿತೆಯೇರಿ ಅಗ್ನಿಜ್ವಾಲೆಗಳಲ್ಲಿ ದಹಿಸಿ ಹೋದಳು ಎಂದು ಗ್ರೀಕ್ ವಿದ್ವಾಂಸ ಡಿಯೊಡರಸ್ ಸಿಕುಲಿಸ್ ಹೇಳಿದ್ದಾನೆ.

ಯುದ್ಧದಲ್ಲಿ ಜಯಶೀಲನಾದವನ ಕೃಪೆಯಲ್ಲಿ ಬದುಕುವುದಕ್ಕಿಂತ ಸಾಯುವುದೇ ಲೇಸೆಂದು ಸಾಯುವ ಕ್ಷತ್ರಿಯ ಹಾಗೂ ರಜಪೂತ ಸ್ತ್ರೀಯರ ಸಿದ್ಧಾಂತಕ್ಕೆ ಇದು ಪೂರಕವಾಗಿದೆ, ಜೋಹರ್ ಅಥವಾ ವಿಧವೆಯರ ಸಾಮೂಹಿಕ ಅಗ್ನಿಪ್ರವೇಶದ ಪರಂಪರೆಯನ್ನು ಯುದ್ಧ ಹಾಗೂ ಯುದ್ಧದ ಸೋಲಿನ ಸಂದರ್ಭಗಳಲ್ಲಿ ವಿವರಿಸಲಾಗಿದೆ.

ಶಾಕ್ತಪಂಥದ "ಮಹಾನಿರ್ವಾಣ ತಂತ್ರ" ದಿಂದ ಖ್ಯಾತ ಇತಿಹಾಸಕಾರ್ತಿ ರೋಮಿಲಾ ಥಾಪರ್ ಉಲ್ಲೇಖಿಸುತ್ತಾರೆ : "ಸತ್ತ ಪತಿಯೊಂದಿಗೆ ಪತ್ನಿಯನ್ನು ಸುಡಬಾರದು, ಪ್ರತಿ ಸ್ತ್ರೀಯೂ ದೇವಿಯ ಅವತಾರ, ತನ್ನ ಭ್ರಮೆಯಲ್ಲಿ ಪತಿಯ ಚಿತೆಯೇರುವ ಹೆಣ್ಣು ನರಕಕ್ಕೆ ಹೋಗುತ್ತಾಳೆ." ಆದ್ದರಿಂದ ಅನುಸರಿಸಬೇಕಾದ ಸಂಪ್ರದಾಯವಾಗಿ ಸತಿಗೆ ಸರ್ವಮಾನ್ಯತೆ ಸಿಕ್ಕಿಲ್ಲ.

**ಶಾಸನಗಳು:** ಸತಿ ಆಚರಣೆಯ ಕಾಲ ಗುರುತಿಸುವಂತಹ ಸಾಕ್ಷ್ಯಾಧಾರಗಳು ಶಾಸನಗಳಿಂದ ದೊರೆಯುತ್ತವೆ. ಬಹುಶಃ ಅತ್ಯಂತ ಪುರಾತನವಾದ ಕ್ರಿ. ಶ. ೫೧೦ ಕಾಲ ಸೂಚಿಸುವ ಶಾಸನವನ್ನು ಮಧ್ಯಪ್ರದೇಶದ ಏರನ್‌ನಲ್ಲಿ ಗುರುತಿಸಲಾಗಿದೆ. ಯುದ್ಧರಂಗದಲ್ಲಿ ಮಡಿದ ಗೋಪರಾಜನ ಪತ್ನಿ "ಸತಿ"ಯಾದುದನ್ನು ಇದು ಸೂಚಿಸುತ್ತದೆ. ಈ ಪ್ರದೇಶದಲ್ಲಿ ಈ ಕಾಲದಲ್ಲಿ ಸತಿ ಆಚರಣೆ ಪ್ರಚಲಿತವಿತ್ತು. ರಾಜಸ್ಥಾನ ಮತ್ತು ನೇಪಾಳದಲ್ಲಿ ದೊರೆತಿರುವ ಇದೇ ಬಗೆಯ ಸ್ಮಾರಕಗಳು ೭–೮ನೇ ಶತಮಾನಕ್ಕೆ ಸೇರಿವೆ.


೭ನೇ ಶತಮಾನದಲ್ಲಿ "ಹರ್ಷ ಚರಿತ" ಸಂಸ್ಕೃತ ನಾಟಕ ಬರೆದ ಬಾಣಭಟ್ಟ, ರಾಜ ಹರ್ಷವರ್ಧನನ ತಾಯಿ ಸತಿ ಆಗುವುದನ್ನು ಖಂಡಿಸುವುದಿಲ್ಲ. ಬಹುಶಃ ಅದು ಅರಸನ ಅಧಿಕೃತ ಜೀವನ ಚರಿತ್ರೆಯಾದ್ದರಿಂದ

[illegible] ತನ್ನ "ಕಾದಂಬರಿ" ಯಲ್ಲಿ ಈ ಪದ್ಧತಿಯ ಬಗ್ಗೆ ಬಾಣಭಟ್ಟ ತೀವ್ರ ಆಕ್ಷೇಪವೆತ್ತಿದ್ದಾನೆ ಅಲ್ಲದೆ ಸತಿಯಾಗದ ಅನೇಕ ಉನ್ನತ ಸ್ಥಾನಮಾನದ ಮಹಿಳೆಯರ ಹೆಸರು ಪಟ್ಟಿಮಾಡಿದ್ದಾನೆ.

ಮಧ್ಯ ಯುಗದ ವೇಳೆಗೆ ಸತಿ ಸಂಪ್ರದಾಯದ ಅಂಗವಾಗಿತ್ತು. ಪತಿವ್ರತೆಯ ಆದರ್ಶವಾಗಿ, ಮುಕ್ತಿಯ ದಾರಿಯಾಗಿ ಧಾರ್ಮಿಕ ಗ್ರಂಥಗಳಲ್ಲಿ ಚಿತ್ರಿಸಲಾಗಿತ್ತು.

ಆದರೂ ೧೦ನೇ ಶತಮಾನದ ಖ್ಯಾತ ವಿದ್ವಾಂಸ ಆಲ್ ಬೆರೂನಿ ಪ್ರಕಾರ, ವೈಧವ್ಯದ ಕಷ್ಟಕೋಟಲೆಗಳಿಂದ ಮುಕ್ತರಾಗಲು ಹಿಂದೂ ಮಹಿಳೆಯರು ಸತಿಯರು "ಸತಿ" ಯರಾದ ಘಟನೆಗಳನ್ನು ಸೂಚಿಸುವ ಶಾಸನಗಳು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಲಭ್ಯವಿದೆ. ಮುಸ್ಲಿಂ ದಾಳಿಗಳಿಗೆ ಮುಂಚೆಯೇ ಈ ಪದ್ಧತಿ ವ್ಯಾಪಕವಾಗಿ ಪ್ರಚಲಿತವಿತ್ತು ಎಂಬುದನ್ನೂ ಇದು ಸೂಚಿಸುತ್ತದೆ. ಈ ಶಾಸನಗಳಲ್ಲಿ ಪ್ರಸ್ತಾಪಿಸಲಾಗಿರುವ ಕುಟುಂಬಗಳು ಕ್ಷತ್ರಿಯ ಸ್ಥಾನಮಾನ ಹೊಂದಿರುವಂಥ ಅಥವಾ ಆ ಸ್ಥಾನಮಾನ ಬಯಸುವಂತಹವರದು,

೧೧ನೇ ಶತಮಾನದ ಶಾಸನವೊಂದರಲ್ಲಿ ಶೂದ್ರ ಮಹಿಳೆಯೊಬ್ಬಳ ಪ್ರಸ್ತಾಪವಿದೆ. ಚೋಳರ ದೊರೆಯೊಬ್ಬನ ಕೈಕೆಳಗೆ ಉನ್ನತ ಸೇವಾ ಸ್ಥಾನಮಾನ ಪಡೆದಿದ್ದ ಈಕೆಯ ಪತಿ ಗಂಗ ಅರಸನ ವಿರುದ್ಧ ನಡೆದ



ಯಾಗುವುದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಸ್ತ್ರೀ ಸ್ಥಾನಮಾನ ಸಮಾಜದಲ್ಲಿ ಇಳಿಮುಖವಾಗುತ್ತಿರುವುದು ಈಗಾಗಲೇ ಸ್ಪಷ್ಟವಾಗಿತ್ತು. ಸ್ವತಂತ್ರವಾಗಿ ಪೂಜಿಸುವ ಹಕ್ಕನ್ನೂ ಹೆಣ್ಣಿಗೆ ನಿರಾಕರಿಸಲಾಯಿತು. ಗೃಹಸ್ವಾಮಿನಿಯಾಗಿ, ಪತಿಯ ಆಸೆ ಆಕಾಂಕ್ಷೆಗಳ ದಾಸಿಯಾದಳು ಆಕೆ.

೧೦ರಿಂದ ೧೪ನೇ ಶತಮಾನದವರೆಗೆ ಚಾಲುಕ್ಯ, ಯಾದವ, ಹೊಯ್ಸಳ ಅರಸರಲ್ಲಿ ಅವರವರಲ್ಲೇ ನಡೆದ ಯುದ್ಧಗಳ ಸಂದರ್ಭದಲ್ಲಿ ಮಡಿದ ಯೋಧರ ಪತ್ನಿ

ಯುದ್ಧದಲ್ಲಿ ಮಡಿಯುತ್ತಾನೆ. ತಂದೆ - ತಾಯಿಯರ ವಿರೋಧವನ್ನೂ ಲೆಕ್ಕಿಸದೆ ಈ ಶೂದ್ರ ಮಹಿಳೆ ಸತಿಯಾಗುತ್ತಾಳೆ, ಕ್ಷತ್ರಿಯ ಮಹಿಳೆಯರನ್ನು ಅನುಕರಣೆ ಮಾಡುವ ಈ ಕ್ರಿಯೆಯ ಹಿಂದಿರುವ ಆಶಯ ತನ್ನ ಪತಿ ಹೊಂದಿದ್ದ ಸ್ಥಾನಮಾನವನ್ನು ಸಾಬೀತು ಪಡಿಸುವಂತಹದ್ದಾಗಿತ್ತು.

**ಸತಿ ಸ್ಮಾರಕ ಕಲ್ಲುಗಳು :** ಸತಿ ಆಚರಣೆಯ ಇತಿಹಾಸವನ್ನು ಹೇಳುವ ಮತ್ತೊಂದು ಸಾಧನ ಸತಿ ಸ್ಮಾರಕ ಕಲ್ಲುಗಳು. ಇತ್ತೀಚೆಗಷ್ಟೇ ಈ ಕಲ್ಲುಗ

ಳನ್ನು ದಾಖಲಿಸಿ ಅಧ್ಯಯನ ಮಾಡುವ ಪ್ರಯತ್ನ ನಡೆದಿದ್ದು, ಇವು ಆಯಾಯ ಪ್ರದೇಶಗಳ ಮೇಲೆ ಹೊಸ ಬೆಳಕನ್ನು ಚೆಲ್ಲಿವೆ.

ಸಾಮಾನ್ಯವಾಗಿ ಎಲ್ಲ ಸತಿ ಕಲ್ಲುಗಳಲ್ಲೂ ಈ ಸಂಕೇತಗಳಿರುತ್ತವೆ. ಪ್ರಪಂಚದ ಅನಂತತೆ ಸೂಚಿಸುವ ಸೂರ್ಯ – ಚಂದ್ರ, ಆಶೀರ್ವಾದ ಮಾಡುವ ತರದಲ್ಲಿ ಮೇಲಕ್ಕೆತ್ತಿ ಹಿಡಿದಿರುವ ಬಲ ಮೊಣಕೈ - ಅಂಗೈ ಕೈಯಲ್ಲಿ ಸ್ಪಷ್ಟವಾಗಿ ಗೋಚರಿಸುವ ಬಳೆಗಳು ( ಶಾಶ್ವತ ಮುತ್ತೈದೆತನಕ್ಕೆ ಸಾಕ್ಷಿ), ಅಶುಭ ನಿವಾರಿಸುವುದಕ್ಕಾಗಿ ಕೈಯಲ್ಲಿ ಹಿಡಿದ ನಿಂಬೆಹಣ್ಣು, ಕೆಲವೊಮ್ಮೆ ಒಬ್ಬಳೇ ನಿಂತಿರುವ ಹೆಣ್ಣು ಅಥವಾ ದಂಪತಿಗಳ ಆಕೃತಿಯೂ ಸತಿ ಕಲ್ಲುಗಳಲ್ಲಿ ಇರುತ್ತದೆ. ಆದರೂ ಮೇಲೆ ತಿಳಿಸಿದ ಚಿಹ್ನೆಗಳೇ ಹೆಣ್ಣು ಆಕೃತಿಯ ಬಲಗೈಯಲ್ಲಿ ಇರುತ್ತದೆ.

ಬೌದ್ಧ ಗ್ರಂಥಗಳು "ಸತಿ" ಯನ್ನು ಬೆಂಬಲಿಸುವುದಿಲ್ಲ, ಬದಲಾಗಿ ವಿಧವೆಯರು ಭಿಕ್ಷುಣಿಯರಾಗಲು ಇಚ್ಛಿಸಿದರೆ ಸ್ವಾಗತ ಇರುತ್ತಿತ್ತು. ಬೌದ್ಧ ಸ್ತೂಪಗಳ ಅನೇಕ ಶಾಸನಗಳಲ್ಲಿ ವಿಧವೆಯರು ನೀಡಿದ ದಾನಗಳ ಉಲ್ಲೇಖವಿದೆ. ಕೆಲವು ವಿಶೇಷ ಸಂದರ್ಭಗಳಲ್ಲಿ ನಿಧಾನ ಉಪವಾಸ ಮಾಡುತ್ತಾ ಬದುಕು ಕೊನೆಗಾಣಿಸಿಕೊಳ್ಳಬಹುದು ಎಂದು ಜೈನಗ್ರಂಥಗಳು ಅನುಮತಿ ನೀಡಿವೆ. ಈ ರಿಯಾಯಿತಿ, ಇತರ ಬಗೆಯ ಆತ್ಮಹತ್ಯೆ ವಿರೋಧಿಸಲು ಜೈನರಿಗೆ ತಡೆಯಾಯಿತು.

ಆದರೂ ಜೈನರಲ್ಲಿ ಅನೇಕ ಮಂದಿ ಸತಿ ಹೋಗಿದ್ದರೂ ಸತಿ ಆಚರಣೆ ಪ್ರಚಲಿತ ಸಂಸ್ಕೃತಿ ಆಗಿರಲಿಲ್ಲ. ಅನೇಕ ಜೈನ ವಿಧವೆಯರು ಸನ್ಯಾಸಿನಿಗಳಾಗಿದ್ದ ಉದಾಹರಣೆಗಳಿವೆ.

೧೫ನೇ ಶತಮಾನದಲ್ಲಿ ವಿಜಯನಗರ ಅರಸನ ೩೦೦೦ ಪತ್ನಿಯರು ಹಾಗು ವಾರಾಂಗನೆಯರು ಪತಿಯ ಚಿತೆ ಏರುವುದಾಗಿ ಪ್ರತಿಜ್ಞೆ ಸ್ವೀಕರಿಸಿದ್ದರು. ಈ ಪ್ರತಿಜ್ಞೆ ಆಚರಣೆಗೆ ಬಂತೆ ಇಲ್ಲವೆ ಎಂಬುದಕ್ಕೆ ಸಾಕ್ಷಿ ಇಲ್ಲ ಎಂದು ವೆನಿಸ್ ಪ್ರಯಾಣಿಕ ನಿಕೊಲೊ ಡಿ ಕೊಂಟಿ ದಾಖಲಿಸಿದ್ದಾನೆ. ದಕ್ಷಿಣ ಭಾರತದಲ್ಲೂ ಸತಿ ಅಪರೂಪವೇನಾಗಿರಲಿಲ್ಲ ಎಂಬುದಕ್ಕೆ ಇದು ಸಂಕೇತ. ಮದುರಾ ನಾಯಕನ ಸಾವಿನ ನಂತರ ಅಂದಾಜು ೧೧ ೦೦೦ ಮಹಿಳೆಯರು ಆತನ ಚಿತೆಯೇರಿದರೆಂದು ಕೆಲವು ಮೂಲಗಳು ಹೇಳುತ್ತವೆ. ಇದು ನಡೆಯಿತೊ ಇಲ್ಲವೋ ಎನ್ನುವುದಕ್ಕೆ ದಾಖಲೆಯಿಲ್ಲ,ಆದರೆ ಸತಿ ಆಚರಣೆ ವ್ಯಾಪಕವಾಗಿ ಪ್ರಚಲಿತವಿತ್ತೆಂಬುದು ಮಾತ್ರ ಇದರಿಂದ ವೇದ್ಯ.

"ಸತಿ" ಘಟನೆಗಳ ಬಗ್ಗೆ ಭಾರತಕ್ಕೆ ಬಂದ ಅನೇಕ ವಿದೇಶಿ ಪ್ರಯಾಣಿಕರು ಬರೆದ ದಾಖಲೆಗಳಿವೆ. ಹಿಂದೂ ಸಂಪ್ರದಾಯ, ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿರುವ ಫ್ರೆಂಚ್ ವಿದ್ವಾಂಸ ಅಬ್ಬೆ ಡುಬಾಯಿಸ್ ಕಂಡ ಅನೇಕ ಸತಿ ಪ್ರಕರಣಗಳನ್ನು ಕಣ್ಣಿಗೆ

---

## ಕರ್ನಾಟಕ ಮಹಿಳಾ ಲೇಖಕಿಯರ ಬಳಗ

ಮಾರ್ಚ್ 24ರಂದು ಕರ್ನಾಟಕ ಮಹಿಳಾ ಲೇಖಕಿಯರ ಬಳಗದಿಂದ ನಾಲ್ವರು ಮಹಿಳಾ ಬರಹಗಾರ್ತಿಯರ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡುತ್ತಾ ಲೇಖಕಿ ಅನುಪಮಾ ನಿರಂಜನ್‌ರವರು ಮಹಿಳಾ ಬರಹಗಳನ್ನು ಪ್ರತ್ಯೇಕವಾಗಿ ಪರಿಗಣಿಸದೆ, ಸಾಹಿತ್ಯ ಪ್ರಪಂಚದಲ್ಲಿ ಗಂಭೀರವಾಗಿ ವಿಮರ್ಶಿಸುವ ಅಗತ್ಯವಿದೆ ಎಂದು ನುಡಿದರು. ಪೂರ್ವಾಗ್ರಹ ಪೀಡಿತ ವಿಮರ್ಶೆಯನ್ನು ಕಟುವಾಗಿ ಟೀಕಿಸಿದ ಇವರು ಲೇಖಕಿಯರ ಸಂಘಟನೆಯ ಅಗತ್ಯವನ್ನು ಒತ್ತಿ ನುಡಿದರು.

ಈ ಸಮಾರಂಭವನ್ನು ಉದ್ಘಾಟಿಸಿದ ಸಾವಿತ್ರಮ್ಮ ಎಚ್. ವಿ. ಇವರು ಕನ್ನಡ ಸಾಹಿತ್ಯ ಲೋಕಕ್ಕೆ ಲೇಖಕಿಯರ ಕೊಡುಗೆ ಅಮೂಲ್ಯವಾದದ್ದು ಎಂದು ಒತ್ತಿ ನುಡಿದರು. 'ಲೇಖಕಿ' ಎಂಬ ಹೊತ್ತಿಗೆಯನ್ನು ಈ ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು.

ಡಾ। ಚಿದಾನಂದ ಮೂರ್ತಿಯವರು ಮಾತನಾಡುತ್ತಾ ಲೇಖಕಿಯರು ಕನ್ನಡ ಚಳುವಳಿಯಲ್ಲಿ ಭಾಗವಹಿಸುವ ಅಗತ್ಯವನ್ನು ಒತ್ತಿ ನುಡಿದರು. ಲೇಖಕಿಯರ ಬಳಗದ ಅಧ್ಯಕ್ಷೆ ಹೇಮಲತಾ ಮಹಿಷಿಯವರು ಮಾತನಾಡುತ್ತಾ ಸಂಘವು ಸ್ವಾತಂತ್ರ್ಯ ಪೂರ್ವ ಲೇಖಕಿ 'ಶಾಮಲಾ ದೇವಿ' ಯವರ ಬಗ್ಗೆ ಪುಸ್ತಕ ತರುವ ಯೋಜನೆ ಹೊಂದಿದೆ ಎಂದರು.

---

"ಅಂತಿಮ ಕ್ರಿಯೆಯ ಸಿದ್ಧತೆ ಭರದಲ್ಲಿ ಪತ್ನಿಯನ್ನು ಕಟ್ಟಿಹಾಕಲಾಗುತ್ತಿತ್ತು. ಒಡವೆಗಳಿಂದ ಶೃಂಗರಿಸಿ, ಪೂಜಿಸಿ ಪರಿಪರಿಯಾಗಿ ಶ್ಲಾಘಿಸಲುಗುತ್ತಿತ್ತು. ಮಾನವ ದೇವತೆಯ ಪಾತ್ರವನ್ನು ಚೆನ್ನಾಗಿ ನಿರ್ವಹಿಸುತ್ತಾ, ತನ್ನ ಶಕ್ತಿಯ ಬಗ್ಗೆ ಘೋಷಣೆ ಕೂಗುವ ಜನರನ್ನು ಆಶೀರ್ವದಿಸುತ್ತಾ ಶಾಂತಚಿತ್ತಳಾಗಿ ನಡೆಯುವಳು, ಆದರೆ ಸಾವಿನ ಹಾಸಿಗೆ ಕಂಡೊಡನೆ ಭೀತಿಯಿಂದ ಬಿಳಿಚಿ ನಡುಗುವಳು, ಹೆದರಿದ ಪ್ರಾಣಿಯಂತೆ ತಪ್ಪಿಸಿಕೊಳ್ಳಲು ಒದ್ದಾಡುವಳು ಅಥವಾ ಮೂರ್ಛೆ ಹೋಗುವಳು. ಆಕೆಯನ್ನು ಚಿತೆಗೇರಿಸಿದ ನಂತರ ಉರಿಯುವ ಕೊಳ್ಳಿಹಿಡಿದ ಬ್ರಾಹ್ಮಣರು ಅವಳ ಸುತ್ತ ನಿಲ್ಲುವರು, ಎರಡನೇ ವರ್ತುಲದಲ್ಲಿ ಕತ್ತಿ ಮತ್ತಿತರ ಆಯುಧಗಳನ್ನು ಹಿಡಿದ ಬಂಧು - ಮಿತ್ರರು ನಿಲ್ಲುವರು."

**ಸತಿ ಬಹಿಷ್ಕಾರ ಯತ್ನ:** ವಿಧವಾ ದಹನ ಬಹಿಷ್ಕರಿಸುವ ಪ್ರಯತ್ನ ಆರಂಭವಾದದ್ದೇ ಸುಲ್ತಾನರು ಮತ್ತು ಮೊಘಲರ ಕಾಲದಲ್ಲಿ. ಸತಿ ಬಹಿಷ್ಕರಿಸುವ ಬಗ್ಗೆ ವಿಚಾರ ಮಾಡಿದ ಮುಸ್ಲಿಂ ದೊರೆಗಳಲ್ಲಿ ಹುಮಾಯೂನ್ ಮೊದಲಿಗ, ಹಿಂದೂಗಳ ಸಾಮಾಜಿಕ, ಧಾರ್ಮಿಕ ನೀತಿಯ ಮಧ್ಯ ಪ್ರವೇಶಿಸದಂತಹ ಸಾಮಾನ್ಯ ನೀತಿ ಮುಸ್ಲಿಮರದಾಗಿದ್ದರೂ, ಸತಿ ಬಗ್ಗೆ ಮಿಷನರಿಗಳಂತೇ ಅವರೂ ದಿಗ್‌ಭ್ರಾಂತರಾಗಿದ್ದರು. ಆದರೀ ವಿಚಾರದಲ್ಲಿ ಬಹುದೂರ ಹೋದರೆ ದೇವರ ಕೋಪಕ್ಕೆ ಗುರಿಯಾಗ ಬೇಕಾಗುತ್ತದೆಂದು ಹುಮಾಯೂನ್‌ನ ಮನವೊಲಿಸಲಾಯಿತು. ಬಲಾತ್ಕಾರದಿಂದ ಸತಿ ಆಗುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳನ್ನು ಸತಿ ಸ್ಥಳಗಳಿಗೆ ಕಳಿಸುವಷ್ಟಕ್ಕೆ ಮಾತ್ರ ಈತನ ಕಾಲದ ವಿರೋಧ ಸೀಮಿತವಾಯಿತು.

ಅಕ್ಬರ್ ಒಂದು ಹೆಜ್ಜೆ ಮುಂದೆ ಹೋದ. ಜೋಧ್‌ಪುರ ರಾಜನ ಮಗಳು ತನ್ನ ಬದುಕು ಕೊನೆಗಾಣಿಸಿಕೊಳ್ಳಬಾರದೆಂದು ಆಕೆಯ ಮನ ಒಲಿಸಲು ತಾನೇ ಖುದ್ದಾಗಿ ೧೦೦ ಮೈಲಿಗಳಷ್ಟು ದೂರ ಪ್ರಯಾಣ ಮಾಡಿ ಹೋದ. ಸತಿ ಆಚರಣೆ ವ್ಯಾಪಕವಾಗಿ ಹಬ್ಬದಂತೆ ನಿಯಂತ್ರಣ ತರಲು ಪ್ರಥಮ ಬಾರಿಗೆ ಯತ್ನಿಸಿದ ಅಕ್ಬರ್ ಎಳೆ ವಯಸ್ಸಿನ ವಿಧವೆಯರು ಸತಿ ಆಗುವುದನ್ನು ಆತ ನಿಷೇಧಿಸಿದ, ವೈಧವ್ಯದ ಬದುಕು ಹಾಗೂ ಬದುಕು ಕೊನೆಗಾಣಿಸಿಕೊಳ್ಳುವ ನಿರ್ಧಾರಕ್ಕೆ ಇರುವ ನೇರ ಸಂಬಂಧ ಅರಿತ ಅಕ್ಬರ್ ವಿಧವಾವಿವಾಹ ಪ್ರೋತ್ಸಾಹಿಸಿದ. ಸತಿ ಆಗಲಿಚ್ಛಿಸಿದವರು ಕೊತ್ವಾಲನ ಪೂರ್ವಾನುಮತಿ ಪಡೆಯಬೇಕೆಂದು ಕಟ್ಟುಪಾಡು ವಿಧಿಸಿದ, ಇದರಿಂದ ತಮ್ಮ ನಿರ್ಧಾರ ಹಿಂತೆಗೆದುಕೊಳ್ಳಲು ಮನ ಒಲಿಸುವ ಕ್ರಿಯೆಗೆ ವೇದಿಕೆಯೊಂದು ಸೃಷ್ಟಿಯಾದಂತಾಯಿತು.

೧೯ನೇ ಶತಮಾನದಲ್ಲಿ ಪೂರ್ವ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಬಂಗಾಳದಲ್ಲಿ ಸತಿ ವ್ಯಾಪಕವಾಗಿತ್ತು. ಅದರಲ್ಲೂ ಬ್ರಾಹ್ಮಣ ವರ್ಗದಲ್ಲಿ ಇದು ಹೆಚ್ಚು ಪ್ರಚಲಿತವಾಗಿತ್ತು. ೧೮೧೮ರ ಒಂದೇ ವರ್ಷದಲ್ಲಿ ೮೩೯ ಸತಿ ಪ್ರಕರಣಗಳು ವರದಿಯಾಗಿವೆ.


ಆಗ ಬಂಗಾಳದಲ್ಲಿ ಪತಿಯ ಆಸ್ತಿಯಲ್ಲಿ ವಿಧವಾ ಹೆಣ್ಣು ಪಾಲು ಪಡೆಯುವಂತಹ ದಯಾಭಾಗ ವ್ಯವಸ್ಥೆ ಜಾರಿಯಲ್ಲಿತ್ತು. ಸತಿ ಧಾರ್ಮಿಕ ಆಚರಣೆ

೨೦ನೇ ಪುಟ ನೋಡಿ

ಓಯಸಿಸ್

ಪ್ರೇಮದುರಿಯ
ಮರ —
ಭೂಮಿಯಲ್ಲಿ
ಓಯಾಸಿಸ್ ಎಂದು
ಭ್ರಮಿಸಿ ನಲ್ಲ
ನಿನ್ನಾಸರೆಗೆ
ಸೇರಿದ ಮೇಲೆ
ಅರಿ - ವಾಯಿತು
ನೀ ಓಯಾಸಿಸ್
ಅಲ್ಲ,
ಉಪ್ಪು ನೀರಿನ
ಸರೋವರೆ ಎಂದು !

ಡಿ. ವಿ. ಬಡಿಗೇರ



## ಬಲಿ

ಹೀಗೆ
ಅದೆಷ್ಟೋ ದೀವಳಿಗೆ
ಬಂತು — ಹೋಯಿತು
— ಎದೆಯ ಇರುಳಿಗೆ ದೀಪ
ತರಲಿಲ್ಲ ಮಾತ್ರ.
ಕ್ರೂರ ಯಾತನೆಯ ಆಕ್ಟೋಪಸ್
ಬಿಗಿತ ಸಡಿಲಿಸಲಿಲ್ಲ.
ಕಗ್ಗತ್ತಲೆಯ ಇಕ್ಕಳದಲ್ಲಿ
ಸಿಕ್ಕಿಕೊಂಡ ಬದುಕು
ಸತ್ತು ಶವವಾಗದೆ
ಬದುಕಿ ಬೆಳಗಾಗದೆ
ಬಿಕ್ಕಿ ಬಿಕ್ಕಿ ಬಸಿವ ಕಣ್ಣೀರು
ತೊಡೆವ ಬೆರಳು
ಹುಟ್ಟಿ ಬರಲಿಲ್ಲ.
ಪದೇ ಪದೇ ಕತ್ತೊತ್ತುವ
ಸುರುಬಾಣ - ಗರ್ನಾಲು - ಸರಪಟಾಕಿ
ಎದೆಗೊದೆವ ಅಟ್ಟಹಾಸ
ಮಿದುಕಿರಣವಲ್ಲ.
ಪಾತಾಳದ ಪದರುಗಳಿಗೆ
ಬಲಿಬಿದ್ದ ಬಾಳುವೆಗೆ
ದಿನವಲ್ಲ ಮೂರು
ಚಣಕ್ಕಾದರೂ ಅದೆಂದು
ಸಿಕ್ಕೀತು ಬೆಳಕಿಗೆ ಮೇಲೆತ್ತುವ
ಪಾಡ್ಯ - ಬಿದಿಗೆ - ತದಿಗೆ ?
ಇನ್ನೆಷ್ಟು ಕಾಯಬೇಕು
ಕತ್ತಲೆಯ ಬಸಿರೊಡೆವ ಮುಹೂರ್ತಕ್ಕೆ ?

ಭಾಗೀರಥಿ ಹೆಗಡೆ

# ಆರೋಗ್ಯ

## ಗರ್ಭ ನಿರೋಧಕ ಮಾತ್ರೆಗಳು

ಗರ್ಭನಿರೋಧಕ ಮಾತ್ರೆಗಳು ಹೇಗೆ ಕೆಲಸ ಮಾಡುತ್ತವೆಯೆಂದು ತಿಳಿಯುವ ಮೊದಲು ಋತುಚಕ್ರದ ಬಗ್ಗೆ ತಿಳಿಯಬೇಕು. ಹಾರ್ಮೋನುಗಳ ಏರಿಳಿತಗಳು ಋತುಚಕ್ರಕ್ಕೆ ಮುಖ್ಯ ಕಾರಣ. ಈ ಋತುಚಕ್ರಕ್ಕೆ ಸಂಬಂಧಪಟ್ಟ ಮುಖ್ಯ ಅಂಗಗಳೆಂದರೆ, ಹೈಪೊಥಲಮಸ್ (ಮೆದುಳಿನ ಒಂದು ಭಾಗ), ಪಿಟ್ಯೂಟರಿ ಗ್ರಂಥಿ ಹಾಗು ಅಂಡಾಣುಗಳು. ಹೈಪೊಥಲಮಸ್ ಪಿಟ್ಯೂಟರಿ ಗ್ರಂಥಿಗೆ ಸಂಜ್ಞೆ ನೀಡುತ್ತದೆ. ಪಿಟ್ಯೂಟರಿ ಗ್ರಂಥಿಯು ಅಂಡಾಣುಗಳಿಗೆ ಸಂಜ್ಞೆ ನೀಡಿ, ಅಂಡಾಣುಗಳು ಮತ್ತೆ ಹೈಪೊಥಲಮಸ್‌ಗೆ ಸಂಜ್ಞೆ ನೀಡುತ್ತದೆ. ಈ ಸಂಜ್ಞೆಯು – ದೇಹದ ವಿವಿಧ ಅಂಗಗಳಿಂದ ಸ್ರವಿಸುವ ಹಾರ್ಮೋನ್‌ಗಳಿಂದಾಗುತ್ತದೆ. ಇದು ರಕ್ತದ ಮೂಲಕ ದೇಹದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಕೊಂಡೊಯ್ಯಲ್ಪಡುತ್ತದೆ.

ಅಂಡಾಣುಗಳು ಉತ್ಪಾದಿಸುವ ಹಾರ್ಮೋನ್‌ಗಳ ಏರಿಳಿತಗಳಿಗೆ, ಹೈಪೊಥಲಮಸ್ ಸೂಕ್ಷ್ಮವಾಗಿರುತ್ತದೆ. ಇಸ್ಟ್ರೋಜನ್ ಹಾರ್ಮೋನ್ ನಿಶ್ಚಿತ ಮಟ್ಟಕ್ಕಿಂತ ಕಮ್ಮಿಯಾದಾಗ ಹೈಪೊಥಲಮಸ್ ಎಫ್. ಎಸ್. ಎಚ್. ಆರ್. ಎಫ್. — ಫಾಲಿಕಲ್ ಸ್ಟಿಮುಲೇಟಿಂಗ್ ಹಾರ್ಮೋನ್ ರಿಲೀಸಿಂಗ್ ಫ್ಯಾಕ್ಟರ್ ಅನ್ನು ಬಿಡುಗಡೆಮಾಡುತ್ತದೆ. ಇದು ಪಿಟ್ಯೂಟರಿ ಗ್ರಂಥಿಯನ್ನು ಎಫ್.ಎಸ್.ಎಚ್ ಬಿಡುಗಡೆಮಾಡಲುತ್ತೇಜಿಸುತ್ತದೆ. ಇದು ೧೦ – ೨೦ರವರೆಗೆ ಅಂಡಾಣುವಿನ ಚೀಲಗಳನ್ನು ಬೆಳೆಯಲು ಅನುಮೋದಿಸುತ್ತದೆ. ಇವುಗಳಲ್ಲಿ ಒಂದೇ ಒಂದು ಸಂಪೂರ್ಣವಾಗಿ ಬೆಳೆಯುತ್ತದೆ. ಇನ್ನುಳಿದವು ಚೀಲದಿಂದೊಡೆದು ಅಂಡವು ಹೊರಬರುವ ಮೊದಲೇ ಕ್ಷೀಣಿಸುತ್ತದೆ.

ಕೊ

ಗ್ರಾ ಫಾಲಿಕಲ್ ಬೆಳೆದಂತೆ ಇಸ್ಟ್ರೋಜನ್ ಹಾರ್ಮೋನ್ ಅನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸುತ್ತದೆ. ಈ ಇಸ್ಟ್ರೋಜನ್ ಹಾರ್ಮೋನು ಗರ್ಭಕೋಶದಲ್ಲಿ ಲೋಳೆಯಾಗಿರುವ ಪೊರೆ ಹೆಚ್ಚು ಬೆಳವಣಿಗೆ ಅಥವಾ ಹೆಚ್ಚು ಫಲವತ್ತಾಗಿಸಲು ಸಹಾಯಕವಾಗುತ್ತದೆ. ಚೀಲದೊಳಗಿನ ಅಂಡವು ಸಂಪೂರ್ಣ ಬೆಳೆದಾಗ, ಚೀಲವು ಇಸ್ಟ್ರೋಜನ್‌ನೊಂದಿಗೆ, ಪ್ರೋಜೆಸ್ಟಿರಾನ್ ಹಾರ್ಮೋನನ್ನು ಹೆಚ್ಚು ಸ್ರವಿಸುತ್ತದೆ. ಇವೆರಡು ಹಾರ್ಮೋನುಗಳ ಸಂಯೋಗವು, ಹೈಪೊಥಲಮಸ್ ಎಫ್. ಎಸ್. ಎಚ್. ಆರ್. ಎಫ್. ಮತ್ತು ಎಲ್. ಎಚ್.ಗಳನ್ನು ಸ್ರವಿಸಲು ಪ್ರೇರಕವಾಗುತ್ತದೆ. ಈ ಎಫ್. ಎಸ್. ಎಚ್. ಆರ್. ಎಫ್. ಒಂದು ನಿಶ್ಚಿತ ಮಟ್ಟವನ್ನು ತಲುಪಿದಾಗ, ಅಂಡವು ಚೀಲದೊಳಗಿಂದ ಹೊರಬರಲು ಸಂಜ್ಞೆ ನೀಡುತ್ತದೆ. ಎಲ್. ಎಚ್.ನ ಪ್ರಭಾವದಿಂದ ಫಾಲಿಕಲ್‌ನ ಕಾರ್ಯವಿಧಾನ ಬದಲಾಗುತ್ತದೆ. ಇದೇ ಚೀಲವು ಕಾರ್ಪಸ್ ಲ್ಯುಟಿಯಂ ಆಗಿ ಪರಿವರ್ತನೆಗೊಂಡ ನಂತರ, ಇಸ್ಟ್ರೋಜನ್‌ನ ಉತ್ಪಾದನೆಯನ್ನು ಕಡಿಮೆಗೊಳಿಸಿ, ಪ್ರೋಜೆಸ್ಟಿರಾನ್ ಹಾರ್ಮೋನನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸುತ್ತದೆ, ಈ ಪ್ರೋಜೆಸ್ಟಿರಾನ್ ಹಾರ್ಮೋನ್ ಪೂರ್ಣ ಬೆಳೆದ ಅಂಗಕ್ಕೆ ಬೇಕಾಗುವ ರಸಗಳನ್ನುತ್ಪಾದಿಸಲು ಪ್ರಚೋದಿಸುತ್ತದೆ, ಓವುಲೇಶನ್ ಆದ ಕ್ಷಣವೆ ಎಫ್. ಎಸ್. ಎಚ್. ತನ್ನ ಮಾಮೂಲಿ ಮಟ್ಟಕ್ಕೆ ತಲುಪುತ್ತದೆ. ಪ್ರೋಜೆಸ್ಟಿರಾನ ಪ್ರಮಾಣ ಹೆಚ್ಚಾದಂತೆ ಎಲ್. ಎಚ್. ಮಟ್ಟವು ನಿಧಾನವಾಗಿ ಇಳಿಯುತ್ತದೆ. ಅಂಡವು ಫಲವತ್ತಾಗಿದ್ದರೆ ಕಾರ್ಪಸ್‌ಲ್ಯುಟಿಯಂ ಪ್ರೋಜೆಸ್ಟಿರಾನ್, ಇಸ್ಟ್ರೋಜನ್ ಸ್ರವಿಸುವುದನ್ನು ಮುಂದುವರಿಸುತ್ತದೆ. ಬಸಿರನ್ನುಳಿಸಿಕೊಳ್ಳಲು, – ಬೆಳೆಯುತ್ತಿರುವ ಮಾಸುಚೀಲವು ಸ್ರವಿಸುವ ಪ್ರಚೋದನೆಯಿಂದಾಗಿ ಪ್ರೋಜೆಸ್ಟಿರಾನ್ ಇಸ್ಟ್ರೋಜನ್ ಉತ್ಪಾದಿಸುವುದನ್ನು ಕಾರ್ಪಸ್‌ಲ್ಯುಟಿಯಂ ಮುಂದುವರೆಸುತ್ತದೆ.

ಅಂಡವು ಫಲವತ್ತಾಗದಿದ್ದಲ್ಲಿ ಕಾರ್ಪಸ್‌ಲ್ಯುಟಿಯಮ್ (ತನ್ನ ಕಾರ್ಯವಿಧಾನ ನಿಲ್ಲುವವರೆವಿಗೂ) ಕ್ಷೀಣಿಸುತ್ತಾ ಹೋಗುತ್ತದೆ, ಇದರಿಂದಾಗಿ ಕಾರ್ಪಸ್ ಲ್ಯುಟಿಯಂ ಉತ್ಪಾದಿಸಿದ ಹಾರ್ಮೋನ್‌ಗಳ ಮಟ್ಟವು ಕಮ್ಮಿಯಾಗಿ. ಗರ್ಭಕೋಶದ ಲೋಳೆಯಾದ ಪೊರೆಯನ್ನುಳಿಸಿಕೊಳ್ಳಲು ಅಸಮರ್ಥವಾಗಿ ರಕ್ತಸ್ರಾವಕ್ಕೆ ಕಾರಣವಾಗುತ್ತದೆ. ಈಸ್ಟ್ರೋಜನ್ ಹಾರ್ಮೋನ್ ತೀರ

ಕೆಳಮಟ್ಟಕ್ಕಿಳಿದಾಗ ಹೈಪಾಥಲಮಸ್ ಎಫ್. ಎಸ್. ಎಚ್. ಆರ್. ಎಫ್.ನ್ನು ಬಿಡುಗಡೆಮಾಡುತ್ತದೆ ಋತುಚಕ್ರವು ಪುನಃ ಪ್ರಾರಂಭವಾಗುತ್ತದೆ.

ಗರ್ಭನಿರೋಧಕ ಮಾತ್ರೆಗಳು :

ಸಿಂಥೆಟಿಕ್ ಈಸ್ಟ್ರೋಜನ್ — ಈ ಮಾತ್ರೆಯು ಅಂಡಾಶಯದೊಳಗಿನ ಅಂಡದ ಬೆಳವಣಿಗೆಯನ್ನು ಕುಂಠಿತಗೊಳಿಸುವ ಮೂಲಕ, ಗರ್ಭವನ್ನು ನಿರೋಧಿಸುತ್ತದೆ. ಈ ಮಾತ್ರೆ, ಈಸ್ಟ್ರೋಜನ್ ಮಟ್ಟ ಹೆಚ್ಚಿಸಿ ಎಫ್. ಎಸ್. ಎಚ್. ಬಿಡುಗಡೆಯಾಗದಂತೆ ಮಾಡುತ್ತದೆ ಯಾದ್ದರಿಂದ ಮಾತ್ರೆ ತೆಗೆದುಕೊಂಡ ತಿಂಗಳಲ್ಲಿ ಅಂಡಾಶಯವು ಜಡವಾಗಿರುತ್ತದೆ.

ಸಿಂಥೆಟಿಕ್ ಪ್ರೋಜೆಸ್ಟಿರಾನ್ :- ಈ ಮಾತ್ರೆಯು ಯೋನಿಸ್ರಾವವನ್ನು ಹೆಚ್ಚು ದಪ್ಪನಾಗಿಸುವುದರಿಂದ ವೀರ್ಯಾಣುವು ಒಳಗೆ ಹರಿದು ಬರುವುದಿಲ್ಲ, ಮತ್ತು ಅಂಡದ ಬೆಳವಣಿಗೆಗೆ ಅವಶ್ಯವಾದ ಗರ್ಭಕೋಶದ ಲೋಳೆಪೊರೆಯನ್ನು ಸರಿಯಾಗಿ ಬೆಳೆಯದಂತೆ ತಡೆಯುತ್ತದೆ.

ಸಿಕ್ವೇನಿಶಿಯಲ್ ಮಾತ್ರೆ :- ಕೆಲ ದಿನಗಳವರೆಗೆ ಇಸ್ಟ್ರೋಜನ್ ಮಾತ್ರೆಗಳನ್ನುಪಯೋಗಿಸಿ ನಂತರ ಇಸ್ಟ್ರೋಜನ್ ಪ್ರೋಜೆಸ್ಟಿರಾನ್ ಎರಡು ಸೇರಿರುವ ಮಾತ್ರೆಗಳನ್ನುಪಯೋಗಿಸುವುದು. ಇದು ಹೆಚ್ಚು ಪರಿಣಾಮಕಾರಿಯಲ್ಲ ಮತ್ತು ಇದನ್ನುಪಯೋಗಿಸಿದ ನಂತರದ ಪರಿಣಾಮಗಳು ಉಳಿದೆರಡು ಮಾತ್ರೆಗಳಿಗಿಂತ ಹೆಚ್ಚು. ಇದರ ಉಪಯೋಗ ವಿರಳ.

ಮಾತ್ರೆಯ ಕಾರ್ಯವಿಧಾನ :— ೧ನೇ ದಿನ ರಕ್ತಸ್ರಾವ ಪ್ರಾರಂಭ.

೫ನೇ ದಿನ ಮೊದಲನೇ ಮಾತ್ರೆ ತೆಗೆದುಕೊಳ್ಳಬೇಕು (ಸಿಂಥೆಟಿಕ್ ಹಾರ್ಮೋನ್ ಈಸ್ಟ್ರೋಜನ್ ಮತ್ತು ಪ್ರೋಜೆಸ್ಟಿರಾನ್)

ಈಸ್ಟ್ರೋಜನ್ — ನಮ್ಮ ದೇಹದಲ್ಲಿರುವ ಈಸ್ಟ್ರೋಜನ್‌ಗಿಂತ ಹೆಚ್ಚು ಈಸ್ಟ್ರೋಜೆನನ್ನು ಹೊಂದಿರುತ್ತದೆ. ಈ ಈಸ್ಟ್ರೋಜನ್ ಮಟ್ಟ, ಪಿಟ್ಯುಟರಿ ಗ್ರಂಥಿ ಸ್ರವಿಸುವ ಎಫ್. ಎಸ್. ಎಚ್. ನ್ನು ತಡೆಯುತ್ತದೆ, ಹೀಗೆ ತಡೆಯುವುದರ ಮೂಲಕ ಅಂಡವು ಬೆಳೆಯುವುದನ್ನು ಕುಂಠಿತಗೊಳಿಸುತ್ತದೆ. ಈ ಪರಿಮಾಣದ ಈಸ್ಟ್ರೋಜನನ್ನು ೨೦ ದಿನಗಳವರೆಗೆ ತೆಗೆದುಕೊಂಡಾಗ, ಆ ತಿಂಗಳಲ್ಲಿ ಬೆಳೆಯಬೇಕಾಗಿದ್ದ ಅಂಡವನ್ನು ತಡೆಯುವುದು. ಆದ್ದರಿಂದ ವೀರ್ಯಾಣುವಿನಿಂದ ಫಲವತ್ತಾಗಬೇಕಾದ ಅಂಡವೇ ಇರುವುದಿಲ್ಲ.

ಪ್ರೋಜೆಸ್ಟಿರಾನ್ ಮಾತ್ರೆ — ಈ ಮಾತ್ರೆ ೨ವಿಧದಲ್ಲಿ ಪರಿಣಾಮಕಾರಿ, - ಯೋನಿಸ್ರಾವವನ್ನು ಹೆಚ್ಚು ದಪ್ಪನಾಗಿಸುವುದರಿಂದ ವೀರ್ಯಾಣುವು ಒಳಗೆ ಹರಿದು ಬರುವುದಿಲ್ಲ, ಗರ್ಭಕೋಶದ ಲೋಳೆಪೊರೆಯನ್ನು ಬೆಳೆಯದಂತೆ ಮಾಡುತ್ತದೆ. ಅಕಸ್ಮಾತ್ ವೀರ್ಯಾಣುವು ಒಳಬಂದು ಅಂಡವು ಫಲವತ್ತಾದರೂ ( ಮಾತ್ರೆ ತೆಗೆದುಕೊಳ್ಳುವುದನ್ನು ಒಂದಿನ ಮರೆತಲ್ಲಿ ಅಥವಾ ತೆಗೆದುಕೊಳ್ಳುತ್ತಿರುವ ಈಸ್ಟ್ರೋಜನ್ ಮಟ್ಟ ಕಮ್ಮಿಯಾಗಿದ್ದಲ್ಲಿ ) ಅದು ನೆಲೆಗೊಳ್ಳದಂತೆ ಮಾಡುವುದು.

೬ನೇ ದಿನದಿಂದ ೨೫ನೇ ದಿನ - ದಿನಕ್ಕೊಂದರಂತೆ ಮಾತ್ರೆ ತೆಗೆದುಕೊಳ್ಳಬೇಕು.

೨೬ನೇ ದಿನ - ಕೊನೆಯ ಮಾತ್ರೆ.

೨೭ - ೨೮ನೇ ದಿನ ಇದ್ದಕ್ಕಿದ್ದಂತೆ ಕಮ್ಮಿಯಾಗುವ ಈಸ್ಟ್ರೋಜನ್, ಪ್ರೋಜೆಸ್ಟಿರಾನ್‌ಗಳ ಮಟ್ಟದಿಂದ ಗರ್ಭಕೋಶದ ಲೋಳೆಪೊರೆ ಕ್ಷೀಣಿಸುತ್ತಾ ಹೋಗುತ್ತದೆ.

೨೯ನೇ ದಿನ - ರಕ್ತಸ್ರಾವ ಪ್ರಾರಂಭ, ಪ್ರೋಜೆಸ್ಟಿರಾನ್ ಪರಿಣಾಮವಾಗಿ ರಕ್ತಸ್ರಾವ ಮೊದಲಿಗಿಂತ ಕಮ್ಮಿಯಾಗಿರುತ್ತದೆ.

**ಮಾತ್ರೆ ತೆಗೆದುಕೊಳ್ಳುವುದರಿಂದ ಉಟಾಗುವ ಪರಿಣಾಮಗಳು :-** ಇದರ ಪರಿಣಾಮಗಳು ಅನೇಕ. ತೆಗೆದುಕೊಳ್ಳುವ ಮಾತ್ರೆಗಳು ರಕ್ತದೊಂದಿಗೆ ದೇಹದೆಲ್ಲೆಡೆ ಸಂಚರಿಸುವುದರಿಂದ ಅನೇಕ ಅಂಗಾಂಗಗಳ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ಈ ಗರ್ಭನಿರೋಧಕ ಹಾರ್ಮೋನುಗಳು ಇನ್ನು ಸಂಶೋಧನಾ ಮಟ್ಟದಲ್ಲಿರುವುದರಿಂದ ಇವುಗಳ ಪರಿಣಾಮಗಳ ಬಗ್ಗೆ ನಿಖರವಾಗಿ ತಿಳಿದಿಲ್ಲ. ಕೆಲವು ಪರಿಣಾಮಗಳು ಸಂಪೂರ್ಣವಾಗಿ ಮಾನಸಿಕವಾದಂಥವು, ಕೆಲವು ದೈಹಿಕ.

ರಕ್ತ ಹೆಪ್ಪುಗಟ್ಟುವಿಕೆ: ಇದು ಹೆಚ್ಚಿಗೆ ಕಾಲಿನಲ್ಲುಂಟಾಗುತ್ತದೆ. ಕಾಲಿನಲ್ಲಿ ಹೆಪ್ಪುಗಟ್ಟಿದ ರಕ್ತ ಶ್ವಾಸಕೋಶಕ್ಕೆ ತಲುಪಬಹುದು, ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿದರೆ ಲಕ್ವ ಹೊಡೆಯಬಹುದು. ಕಡಿಮೆ ಪ್ರಮಾಣದಲ್ಲಿ ಈಸ್ಟ್ರೋಜನ್ ತೆಗೆದುಕೊಳ್ಳುವುದು ಇದನ್ನು ತಡೆಯಲು ಸಹಾಯವಾಗಬಹುದು. ಈ ಪರಿಣಾಮ ೩೫ ವರ್ಷ ದಾಟಿದ ಸ್ತ್ರೀಯರಲ್ಲಿ, ಧೂಮಪಾನಿ ಸ್ತ್ರೀಯರಲ್ಲಿ ಜಾಸ್ತಿ.

ಹೃದಯಾಘಾತ: ಮಾತ್ರೆ ಸೇವಿಸುವ ಮಹಿಳೆ

...ಹೃದಯದಲ್ಲಿ ರಕ್ತ ಹೆಪ್ಪುಗಟ್ಟುವುದರಿಂದ).

ರಕ್ತದೊತ್ತಡ: ರಕ್ತದೊತ್ತಡ ಸ್ವಲ್ಪ ಹೆಚ್ಚಬಹುದು. ಕೆಲವರಲ್ಲಿ ಇದರ ಪ್ರಮಾಣ ಇನ್ನೂ ಜಾಸ್ತಿಯಾಗಬಹುದು. ಆದ್ದರಿಂದ ಪ್ರತಿ ೬ ತಿಂಗಳಿಗೊಮ್ಮೆ ರಕ್ತದ ಒತ್ತಡವನ್ನು ಪರೀಕ್ಷಿಸಿಕೊಳ್ಳಬೇಕು.

ಸಿಹಿಮೂತ್ರ ರೋಗ: ಕೆಲವು ಮಹಿಳೆಯರಲ್ಲಿ ಮಾತ್ರೆಗಳಿಂದ ಡಯಾಬಿಟೀಸ್ ಜಾಸ್ತಿಯಾಗಬಹುದು.

ತಲೆನೋವು: ಈ ಮಾತ್ರೆಗಳು ಕೆಲವು ಮಹಿಳೆಯರಲ್ಲಿ ಪದೇ ಪದೇ ತಲೆನೋವು, ಅರೆ ತಲೆನೋವಿಗೆ ಕಾರಣವಾಗುತ್ತದೆ. ಅರೆತಲೆನೋವಿರುವವರು ಸೇವಿಸುವುದು ಒಳ್ಳೆಯದಲ್ಲ.

ನಿರುತ್ಸಾಹ: ೪ ಮಹಿಳೆಯರಲ್ಲಿ ಒಬ್ಬರಿಗೆ, ಮಾತ್ರೆಯು ಸಿಡುಕಿಗೆ, ನಿರುತ್ಸಾಹಕ್ಕೆ ಕಾರಣವಾಗಿದೆ. ಕಡಿಮೆ ಪ್ರೋಜೆಸ್ಟಿರೋನ್ ಸೇವಿಸುವುದು, ವಿಟಮಿನ್ ಬಿ-೬ ತೆಗೆದುಕೊಳ್ಳುವುದು ಸಹಾಯಕವಾಗುವುದು.

ಓಕರಿಕೆ: ಮಾತ್ರೆಯಲ್ಲಿರುವ ಈಸ್ಟ್ರೋಜೆನ್ ಅಂಶ ಹೊಟ್ಟೆಯನ್ನು ಕೆರಳಿಸುವುದರಿಂದ ಓಕರಿಕೆ ಉಂಟಾಗುತ್ತದೆ. ಸಾಮಾನ್ಯವಾಗಿ ೨ ತಿಂಗಳ ನಂತರ ಕಡಿಮೆಯಾಗುತ್ತದೆ. ಅಂಟಾಸಿಡ್ ಮಾತ್ರೆ ತೆಗೆದುಕೊಳ್ಳುವುದು, ಊಟದೊಂದಿಗೆ ಅಥವಾ ಮಲಗುವ ಮೊದಲು ಮಾತ್ರೆ ತೆಗೆದುಕೊಳ್ಳಬೇಕು.

ಸುಸ್ತು: ಮಾತ್ರೆ ಉಪಯೋಗಿಸುವವರಲ್ಲಿ ಸುಸ್ತು ಜಡತೆ ಕಾಡುವುದು ಸಾಮಾನ್ಯ. ಇದು ೨-೩ ತಿಂಗಳ ನಂತರ ಅಂದರೆ ದೇಹವು ಹಾರ್ಮೋನುಗಳ ವಿವಿಧ ಮಟ್ಟಕ್ಕೆ ಹೊಂದಿಕೊಂಡಾಗ ಸರಿಯಾಗುತ್ತದೆ.

ಯೋನಿಸ್ರಾವ ಮತ್ತು ಉರಿಯೂತ: ಬ್ಯಾಕ್ಟೀರಿಯಾ, ವೈರಸ್. ಫಂಗಸ್ ಅಥವಾ ಟ್ರೈಕೊಮೊನಾಸ್‌ನ ಸೋಂಕಿನಿಂದ ಉರಿಯೂತ ಉಂಟಾಗುತ್ತದೆ. ಮಾತ್ರೆಗಳಿಂದ ಯೋನಿಯ ಮಾಮೂಲಿ ವಾತಾವರಣ ಬದಲಾಗಿ ಹೆಚ್ಚು ಸೂಕ್ಷ್ಮಾಣು ಜೀವಿಗಳ ಬೆಳವಣಿಗೆಗೆ ಕಾರಣವಾಗುತ್ತದೆ. ಇದನ್ನು ಗುಣಪಡಿಸಬಹುದು ಇಲ್ಲದಿದ್ದಲ್ಲಿ ಮಾತ್ರೆಯನ್ನೆ ನಿಲ್ಲಿಸಬೇಕು. ಹೆಚ್ಚು ಯೋನಿಸ್ರಾವ ಸಾಮಾನ್ಯ ಇದು ಈಸ್ಟ್ರೋಜನ್‌ನಿಂದುಂಟಾಗುತ್ತದೆ. ಇದು ಸೋಂಕಲ್ಲದಿದ್ದರೂ ಹೆಚ್ಚು ತೊಂದರೆ ಕೊಟ್ಟಲ್ಲಿ ಪರೀಕ್ಷಿಸಿಕೊಳ್ಳುವುದೊಳಿತು.

ಮೂತ್ರದ ಹಾಗೂ ಮೂತ್ರದ್ವಾರದ ಸೋಂಕು: ಮಾತ್ರೆಯು ಯೋನಿಯ ಸೋಂಕಿನೊಂದಿಗೆ ಮೂತ್ರಕೋಶದ, ಮೂತ್ರದ್ವಾರದ ಸೋಂಕಿಗೆ ಕಾರಣವಾಗುತ್ತದೆ, ಹೆಚ್ಚು ಪ್ರಮಾಣದ ಈಸ್ಟ್ರೋಜನ್‌ನಿಂದ ಮೂತ್ರಕೋಶದ ಸೋಂಕೂ ಹೆಚ್ಚಾಗುತ್ತದೆ.

ರಕ್ತಸ್ರಾವದಲ್ಲಿ ಬದಲಾವಣೆ: ಸಾಮಾನ್ಯವಾಗಿ ರಕ್ತಸ್ರಾವ ಕಮ್ಮಿ ಇರುತ್ತದೆ, ಕೆಲವೊಮ್ಮೆ ಇಲ್ಲದೆಯೂ ಇರಬಹುದು. ಕೆಲಬಾರಿ ಇದು, ಬಹಳ ಕಾಲದವರೆಗೆ ಮಾತ್ರೆಗಳನ್ನು ತೆಗೆದುಕೊಳ್ಳುವುದರಿಂದ ಅಥವಾ ಹೆಚ್ಚು ಪ್ರೋಜೆಸ್ಟಿರೋನ್ ಉಳ್ಳ ಮಾತ್ರೆ ತೆಗೆದುಕೊಳ್ಳುವುದರಿಂದಾಗುತ್ತದೆ, ೨ ತಿಂಗಳಾದರೂ ಹೀಗೆಯೇ ಇದ್ದಲ್ಲಿ ವೈದ್ಯರನ್ನು ಕಾಣಬೇಕು.

ಯೋನಿಯಿಂದ ರಕ್ತಸ್ರಾವ ಮತ್ತು ಮುಟ್ಟಿನ ಮಧ್ಯೆ ರಕ್ತಸ್ರಾವ: ಗರ್ಭಕೋಶದ ಲೋಳೆ ಪೊರೆಯನ್ನು ಸಂರಕ್ಷಿಸಲು ಸಾಕಷ್ಟು ಪ್ರೋಜೆಸ್ಟಿರೋನ್ ಈಸ್ಟ್ರೋಜೆನ್ ಅಂಶವಿಲ್ಲದಿದ್ದರೆ ಸ್ವಲ್ಪ ಮುಟ್ಟಿನ ಪೊರೆ ಕೋಳೆಯುತ್ತದೆ. ಮಾತ್ರೆ ಸೇವಿಸುವುದನ್ನು ಮರೆತರೂ ಹೀಗಾಗ್ತದೆ. ಗರ್ಭಕೋಶವು ಹಾರ್ಮೋನುಗಳ ಹೊಸಮಟ್ಟಕ್ಕೆ ಹೊಂದಿಕೊಂಡಂತೆ ಇದು ಕಮ್ಮಿಯಾಗುತ್ತದೆ. ರಕ್ತಸ್ರಾವ ಕೆಲ ತಿಂಗಳವರೆಗೂ ನಿಲ್ಲದಿದ್ದರೆ ವೈದ್ಯರನ್ನು ಕಂಡು ಗುಳಿಗೆಯನ್ನು ಬದಲಿಸಬೇಕೇ, ಬೇರೆ ತೊಂದರೆಗಳಿವೆಯೇ ಎಂದು ತಿಳಿದುಕೊಳ್ಳಬೇಕು. ಈ ರೀತಿ ಉಂಟಾಗುವ ರಕ್ತಸ್ರಾವಕ್ಕೂ ಗರ್ಭ ನಿರೋಧಕ ಗುಳಿಗೆಗೂ ಸಂಬಂಧವಿಲ್ಲ.

ಸ್ತನಗಳಲ್ಲಿ ಬದಲಾವಣೆ: ಸ್ತನಗಳು ಹೆಚ್ಚು ಮೃದುವಾಗುತ್ತವೆ. ಒಂದೆರಡು ಋತುಚಕ್ರಗಳಲ್ಲಿ ಕಡಿಮೆ ಆಗುತ್ತವೆ.

ತೂಕ ಹೆಚ್ಚುವಿಕೆ: ಪ್ರೋಜೆಸ್ಟಿರೋನ್ ಹೆಚ್ಚಿರುವ ಗುಳಿಗೆಗಳು ಹಸಿವನ್ನು ಹೆಚ್ಚಿಸುತ್ತವಲ್ಲದೇ ತೂಕವನ್ನೂ ಹೆಚ್ಚಿಸುತ್ತವೆ – ಸ್ನಾಯುಗಳ ಅಂಗಾಂಶದಲ್ಲಿ ಪ್ರೋಟೀನ್ ಅಂಶ ಹೆಚ್ಚುವದರಿಂದ. ವಿಟಮಿನ್ ಕೊರತೆಗೂ ಗುಳಿಗೆಗಳು ಕಾರಣವಾಗುತ್ತವೆ.

ಇದಲ್ಲದೆ ಗರ್ಭ ನಿರೋಧಕ ಗುಳಿಗೆಗಳು - ಯುವತಿಯರಲ್ಲಿ ಮೂಳೆಗಳ ಬೆಳವಣಿಗೆಯನ್ನು ಕುಂಠಿತಗೊಳಿಸಬಹುದು, ಕೀಲುಗಳ ಊದುವಿಕೆಗೆ, ನೋಟದಲ್ಲಿನ ಅಡಚಣೆಗೆ, ಬಾಯಿಯ ಹುಣ್ಣಿಗೆ, ಯೋನಿಯ ಹವಗೆಡುವಿಕೆಗೆ ಕಾರಣವಾಗಬಹುದು.

೧೯ನೇ ಪುಟ ನೋಡಿ

# ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರ ದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿ ರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾ ಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನ ವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗು ಅನುಭವಗಳನ್ನು ಪುಟ್ಟ ಲೇಖನದ ರೂಪ ದಲ್ಲಿ ಬರೆದು ಕಳಿಸಿದ ಲೇಖಗಳಿಗೆಂದು "ಮೌನ ಮಾತಾದಾಗ" ಅಂಕಣವಿದೆ. ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗು ವುದು.

ಸಂ. ಮಂಡಲಿ

## ಯಾರಿಗೂ ಹೆದರಬೇಕಾಗಿಲ್ಲ

"ಒಂದು ನಿಮಿಷ ನಿಂತ್ಕೊಳ್ಳಿ ಶಾರ್ದ, ಅದೇ ನ್ಯಾಗೆ ಓಡ್ತಿದೀಯಾ?" "ಹೋಗಬೇಕು ದೀದಿ, ಕೆಲ್ಸ ಇರುತ್ತೆ ಮನೇಲಿ." "ದಿನಾ ಅದೆಷ್ಟು ಕೆಲ್ಸ ಮಾಡ್ತೀಯೇ ಅಮ್ಮ ಇಲ್ವ?" "ಇದಾರೆ ಆದ ರೇನು ನೀವು ಕೇಳಿಲ್ವ ದೀದಿ, ಅನುಭವವಿಲ್ಲದೆ ಕೆಲಸ ವಿಲ್ಲ ಕೆಲಸವಿಲ್ಲದೆ ಅನುಭವವಿಲ್ಲ ಅನ್ನೋ ಮಾತು, ಅದಕ್ಕೆ ಎಲ್ಲ ತಾಯಂದಿರೂ ತಮ್ಮ ಹೆಣ್ಣು ಮಕ್ಕಳಿಗೆ ತಮ್ಮ ಮನೆಗಳಿಂದ್ಲೆ ತರಬೇತಿ ಕೊಡುತ್ತಾರೆ. ನಾಳೆ ಉದ್ಯೋಗಾರ್ಥಿಯಾಗಿ ಗಂಡನ ಮನೆಗೆ ಹೋದಾಗ ಎಷ್ಟು ಎಕ್ಸ್‌ಪೀರಿಯನ್ಸ್ ಇದೆ ಮನೆ ಚಾಕರೀದು ಅಂತ ಕೇಳಿದ್ರೆ ಹೇಳೋಕೆ ಬೇಡ್ವ ಮತ್ತೆ, ನಾನು ಕೂಡ ಅಂಥ ಒಬ್ಬ ಅಭ್ಯರ್ಥಿ ದೀದಿ ಬರ್ತೀನಿ."

ದಿನವೂ ಹೀಗೆ ಒಗಟಾಗಿ ಮಾತಾಡಿ ನನ್ನ ಮನಸ್ಸಿಗೆ ಕಿಕ್ ಕೊಟ್ಟು ಭಾರವಾದ ನಿಟ್ಟುಸಿರಿನೊ ಡನೆ ಓಡುವ ಶಾರದ ಡಿಗ್ರಿ ಓದುತ್ತಿರುವ ಹುಡುಗಿ' ಮತ್ತು ನನ್ನ ಸ್ನೇಹಿತೆ. ಆಕೆ ಬಸ್ಸಿಂದಿಳಿದು ಈ ಕಡೆ ಬರುವುದಕ್ಕೂ, ನನ್ನ ಮಧ್ಯಾಹ್ನದ ಆಫೀಸಿನ ವೇಳೆ ಮುಗಿದು ಆ ಕಡೆ ಹೊರಡುವುದಕ್ಕೂ ಸರಿ ಉತ್ತರ–ದಕ್ಷಿಣ ದಿಕ್ಕು ಮಧ್ಯದಲ್ಲಿ ಸಂಧಿಸುವಂತೆ. ನಗುವಿನಿಂದ ಪ್ರಾರಂಭವಾದ ಸ್ನೇಹ ನಿಂತು ಮಾತ ನಾಡುವಷ್ಟರ ಮಟ್ಟಿಗೆ ಮುಂದುವರೆದರೂ ತನ್ನ ಬಗ್ಗೆ ಏನೊಂದೂ ಹೇಳೋದಿಲ್ಲ ಈ ಶಾರದ.

ಮಾರನೇ ದಿನ ಮಧ್ಯಾಹ್ನ ಆಫೀಸ್ ಬಿಟ್ಟು ಹೊರಟಿದ್ದೆ ಎದುರಿನಿಂದ ಶಾರಿ ಬಂದಳು, ತುಂಬಾ ನಿತ್ರಾಣಳಾದಂತೆ, ಸಪ್ಪೆಯಾಗಿ ಕಂಡಳು. "ಯಾಕೆ ಶಾರದ ಒಂಥರಾ ಇದ್ದೀಯಾ?, "ಹೊಟ್ಟೆ ಹಸಿವೆ ದೀದಿ, ತಡಿಯೋಕಾಗ್ತಿಲ್ಲ." "ಬಾ ಹಾಗಾದ್ರೆ, ಇಲ್ಲೆ ಕ್ಯಾಂಟೀನ್‌ಗೆ ಹೋಗೋಣ" ಎಂದೆ, ಇಂದು ಒಂದೂ ಮಾತಾಡದೆ ನನ್ನ ಹಿಂದೆ ಬಂದಳು. ಕ್ಯಾಂ ಟೀನಿನ ಸ್ಪೆಷಲ್ ರೂಂನಲ್ಲಿ ಕೂತು, ಇಬ್ಬರೂ ಹೊಟ್ಟೆ ತುಂಬಿಸಿಕೊಂಡ ಮೇಲೆ ತಲೆಯೆತ್ತಿ ಶಾರಿಯ ಮುಖ ನೋಡಿದ, "ನನ್ನ ಬಗ್ಗೆ ತಿಳ್ಕೊಳ್ಳೋದಿಕ್ಕೆ ತುಂಬ ಉತ್ಸುಕರಾಗಿದ್ದೀರಿ ದೀದಿ ಹಾಗಿದ್ರೆ ಕೇಳಿ, ನಾವು ಶ್ರೀಮಂತರೇನು ಅಲ್ಲ, ನನ್ಗಿಂತ ದೊಡ್ಡವರು ಮೂರು ಜನರಲ್ಲಿ ಇಬ್ಬರು ತಮ್ಮ ತಮ್ಮ ಮನೆ ಸೇರ್ಕೊಂಡಿದ್ದಾರೆ. ನನ್ನಣ್ಣ ರಮಾಕಾಂತ, ನನಗಿಂತ ಒಂದು ವರ್ಷ ಹೆಚ್ಚು, ಅಂದರೆ ಫೈನಲ್‌ನಲ್ಲಿ ಓದು ತ್ತಿದ್ದಾನೆ. ಅಪ್ಪ, ಅಮ್ಮ ನಾವಿಬ್ರು ನಾಲ್ಕು ಜನ ಮನೆಯಲ್ಲಿ, ಅಪ್ಪ ಶರಾಬಿ, ಪ್ರತಿದಿನ ಮನೆಯೊಂದು ರಣರಂಗ. ಯಾಕೆ ಜಗಳ ಆಡ್ತಾರೋ ನಂಗೊತ್ತಿಲ್ಲ ಒಂದಿನವಾದ್ರೂ ಪ್ರೀತಿಯಿಂದ ನಮ್ಮ ಹತ್ರ ಮಾತಾ ಡಿಲ್ಲ. ವರ್ಷವಿಡೀ ತಮ್ಮ ಜಗಳ ಪ್ರಪಂಚದಲ್ಲೇ ಇರ್ತಾರೆ. ನಾನು ಮುಂಜಾನೆ ೫ಕ್ಕೆ ಏಳಬೇಕು, ನಲ್ಲಿ ನೀರು ಹಿಡಿದು, ಬಿಸಿ ನೀರಿಗೆ ಹೀಟರ್ಹಾಕಿ, ಬಾಗಿಲು ಗುಡ್ಸಿ, ರಂಗೋಲಿ ಇಟ್ಟು ನಾಲ್ಕು ಜನರಿಗಾಗಿ ತಿಂಡಿ ಕಾಫಿ ಮಾಡಬೇಕು. ಸ್ನಾನ ಮುಗಿಸಿ ಬರೋದ್ರಲ್ಲಿ ಏಳು ಗಂಟೆ. ಏಳೂಕಾಲಿಗೆ ಬಸ್‌ಸ್ಟಾಪ್‌ನಲ್ಲಿರ್ಬೇಕು' ತಿಂಡಿ ಇರ್ಲಿ, ಸರಿ ಡ್ರೆಸ್ ಮಾಡ್ಕೊಳ್ಳೋದಿಕ್ಕು ಪುರ್ಸೊತ್ತಿಲ್ಲ ದೀದಿ."

"ಮಧ್ಯಾಹ್ನ ಕಾಲೇಜು ಬಿಟ್ಟು ಮನೆ ಸೇರೋ

ವಿಶ್ರಾಂತಿ, ಮತ್ತೆ ಓಡ್ಬೇಕು ಬುಕ್‌ಸ್ಟಾಲ್‌ಗೆ ಹೋಗಿ ವಾರಪತ್ರಿಕೆ ದಿನಪತ್ರಿಕೆ ಎಲ್ಲ ಬ್ಯಾಗಲ್ಲಿ ತುಂಬ್ಕೊಂಡು ಪೆಗಲಲ್ಲಿ ನೇತಾಡಿಸ್ತಾ ಮನೆ ಮನೆ ಸುತ್ತಿ ಮನೆಗೆ ಬರೋದ್ರಲ್ಲಿ ಟ್ಯೂಷನ್‌ಗಾಗಿ ಮಕ್ಕಳು ಕಾಯ್ತಾ ಇರ್ತಾರೆ. ಆರರಿಂದ ಎಂಟರವರೆಗೆ ಟ್ಯೂಷನ್ ಆಮೇಲೆ ನನ್ನ ಹೋಂವರ್ಕ್, ಊಟ ಎಲ್ಲ. ಮಾರನೇ ದಿನ ಪುನರಾವರ್ತನೆ. ನನಗೆ ಬೇಕಾದ ದುಡ್ಡು ನಾನೇ ಮಾಡ್ಕೋತೀನಿ. ಅಪ್ಪ, ಅಮ್ಮ ತಮ್ಮ ಪ್ರಪಂಚದಲ್ಲಿ, ಅಣ್ಣ ಹಾಯಾಗಿ ಏಳುತ್ತಾನೆ, ತಿಂತಾನೆ, ಸಂಜೆ ಕ್ಲಬ್ಬಿಗೆ ಹೋದ್ರೆ ರಾತ್ರಿ ಬರ್ತಾನೆ. ತಾನು, ತನ್ನ ಸ್ನೇಹಿತರು, ಅದೇ ಅವನ ಜಗತ್ತು. ನಾನು, ನನ್ನ ಪ್ರಪಂಚದಲ್ಲಿ. ಒಂದೇ ಛಾವಣಿಯ ಕೆಳಗಿದ್ದರೂ, ನಾಲ್ಕು ರೇಖೆಗಳು ನಾವು. ರಮಾ ಕೇಳಿದಾಗೆಲ್ಲ ಅಪ್ಪ ದುಡ್ಡು ಕೊಡ್ತಾರೆ, ನಾನು ಮಾತ್ರ ಕೇಳೋದಿಲ್ಲ. ದೀದಿ, ನಾನು ಅಪ್ಪನ ಹತ್ತಿರ ಮಾತಾಡೋದನ್ನ ಬಿಟ್ಟು ಐದಾರು ವರ್ಷವಾಯ್ತು. ಅಮ್ಮ ಕೂಡ ಒಂದಿನವಾದ್ರೂ ಹತ್ತಿರ ಕೂತು ಮಾತಾಡೋದಿಲ್ಲ, ಹ್ಯಾಗಿದೀಯ ಮಗಳೆ ಅಂತ ಕೇಳೋದಿಲ್ಲ, ನನ್ಹತ್ರ ಮಾತಾಡೋದು ಅಂದ್ರೆ ಬೈಯೋಕೆ ಮಾತ್ರ. ನಿಂತ್ರು ತಪ್ಪು ಕೂತ್ರು ತಪ್ಪು. ಒಂಥರ ಗೂಬೆ ಹಾಗೆ ಒಂಟಿ ಜೀವನ ನಂದು. ಇಷ್ಟೆಲ್ಲ ಆದ್ರೂ ರಮಾನನ್ನು ಕಂಡ್ರೆ ಅಪ್ಪ, ಅಮ್ಮನಿಗೆ ಪ್ರೀತಿ, ನಾಳೆ ಕೊನೆಗಾಲಕ್ಕೆ ನೋಡಿಕೊಳ್ಳೊ ಗಂಡು ಮಗ ಅಲ್ವ ಅವ್ನು. ನಾನು ಮಾತ್ರ ಎಷ್ಟು ಕಣ್ಣೀರು ಸುರ್ಸಿದ್ರೂ ಯಾರ ಪ್ರೀತಿಯೂ ಇಲ್ದೆ ಅದೆಷ್ಟೋ ರಾತ್ರಿ ಕಣ್ಣುಬಿಟ್ಟೆ ಕಳೆದ್ರೂ ಕೇಳೋರ್‍ಯಾರು ಇಲ್ಲ."

"ಇಷ್ಟೆ ಸಾಲ್ದು ಅಂತ ನಾನು ಹೈಸ್ಕೂಲಲ್ಲಿರುವಾಗಲೇ ನನ್ನ ಸೋದರತ್ತೆ ಮಗನ ಜೊತೆ ನನ್ನ ಮದುವೆ ಮಾತು ಆಗಿ ಹೋಗಿದೆ. ಆ ತ್ರಿಪುರ ಸುಂದರಾಂಗ ಹೈಸ್ಕೂಲು ದಾಟಲಾರ್ದೆ, ಸ್ಕೂಲ್ ಬಿಟ್ಟು ಡ್ರೈವಿಂಗ್ ಕಲಿತು ಈಗ ಡ್ರೈವರಾಗಿದ್ದಾನೆ. ಮನೆಯಲ್ಲಿ ಎಲ್ಲರೂ ಅವನಿಗಿಂತ ಚಿಕ್ಕವರು, ಓದುವವರು, ಅವನ ದುಡಿಮೆ ಯಾವುದಕ್ಕೂ ಸಾಲುವುದಿಲ್ಲ, ಇಷ್ಟು ದಿನ ನಾನು ಪಟ್ಟ ಕಷ್ಟ ಕಡಿಮೆ ಆಯ್ತು ಅಂತೇನೋ ಇದಕ್ಕಿಂತ ಹತ್ತುಪಟ್ಟು ಹೆಚ್ಚು ಕಷ್ಟಪಡಬೇಕಾಗುತ್ತೆ. ಹಾಗಂತ ಅಪ್ಪನ ಹತ್ರ ಹೇಳಲು ಹೋದ್ರೆ, ನಿನ್ಹಣೆಬರಹ ಅಂತಾಳೆ. ಅದೆಲ್ಲ ನಂಗೊತ್ತಿಲ್ಲ ನನ್ನ ಹಣೆ

ಜೀವ ಉಳಿಸ್ಕೊಂಡು ಬಾಯ್ಮುಚ್ಚಿ ಸುಮ್ನಿದ್ರೆ ನಂಗು ಪಂಜರದ ಪಾರಿವಾಳಕ್ಕೂ ಏನು ವ್ಯತ್ಯಾಸವಿಲ್ಲ. ಮುಳುಗಿದ ಹೊಂಡದಲ್ಲೆ ಮತ್ತೆ ಮತ್ತೆ ಮುಳುಗಿ ಏಳೋದು ನಂಗೆ ಸೇರೊಲ್ಲ ದೀದಿ, ನಾನು ಬಯಸಿದ ಪ್ರೀತಿ, ಸ್ವಾತಂತ್ರ್ಯ ನೀಡೋ, ರೆಕ್ಕೆ ಬಿಚ್ಚಿ ಹಾಯಾಗಿ ಹಾರೋದಿಕ್ಕೆ ಶುಭ್ರ ಆಕಾಶ ಬೇಕು, ಸ್ವೇಚ್ಛೆಯಾಗಿ ಈಸೋದಿಕ್ಕೆ ವಿಶಾಲ ನದಿ ಬೇಕು. ಮಾತುಕತೆಯಾದಗೂ ಮುಗಿದಿರ್ಲಿ, ಎಂಗೇಜ್‌ಮೆಂಟಾದ್ರು ಆಗಿರ್ಲಿ, ನಾನೇನು ಹೆದ್ರೋದಿಲ್ಲ, ಎಷ್ಟೋ ಸಲಕ್ಕೆ ಗಂಡಸರೇ ಮುರಿಯೋದಿಲ್ವ. ಮದುವೆಯ ಕಲ್ಪನೆ ಇಲ್ಲದಿರೋ ವಯಸ್ಸಿಗೆ ಮಾತುಕೊಟ್ಟಿದ್ದರೆ ಅದಕ್ಕೆ ನಾ ಹೊಣೆಯೇ. ನನ್ನ ತಪ್ಪೆ? ಈ ಹುಡುಗಿಯರಿಗೆ ಹೇಗಿದ್ರೂ ಮದುವೆಯಾಗಲೇ ಬೇಕಲ್ವ? ಮತ್ಯಾಕೆ ಈ ತಂದೆ ತಾಯಿ ಇಷ್ಟು ಆತುರಪಡೋದು? ಜೀವಮಾನವಿಡೀ ಗಂಡನ ಜೊತೆ ಕಳೀಬೇಕಾದ ಅವಳಿಗೂ ಯೋಚಿಸೋ ಸ್ವಾತಂತ್ರ್ಯ, ನಿರ್ಧರಿಸೋ ಹಕ್ಕು, ಯಾಕೆ ಕೊಡೋದಿಲ್ಲ? ಇವರೆಷ್ಟು ಸಡಗರದಿಂದ ಮದುವೆ ಮಾಡಿಕೊಡ್ತಾರೋ ಅಷ್ಟೆ ಸಡಗರದಿಂದ ಆಕೆ ಸಂಸಾರ ಸಾಗಿಸ್ತಾಳೆ ಅನ್ನೋ ಭರವಸೆಯಾದ್ರೂ ಏನಿದೆ? ಅವಳ ಬೇಕು ಬೇಡಗಳನ್ನು ಆಲಿಸುವಷ್ಟಾದರೂ ಸೌಜನ್ಯ ಬೇಡ್ವೆ ಇವರಿಗೆ? ಹೆಣ್ಣು ಎನ್ನುವ ಅನಾದರ, ಅಗೌರವ, ತಾಯಿ ತಂದೆಗಳಿಂದ ಪ್ರಾರಂಭವಾಗಿ, ತನ್ನ ಬಗ್ಗೆ ತಾನೇ ಅನಾದರ ಪಡುವಷ್ಟರ ಮಟ್ಟಿಗೆ ಎಲ್ಲರು ಅವಳನ್ನು ಶೋಷಿಸುತ್ತಾರೆ. ಈ ನಮ್ಮ ಹಳ್ಳಿ ಹುಡುಗಿಯರಂತೂ ಕಣ್ಣು ಮುಚ್ಕೊಂಡೆ ಹೆಜ್ಜೆ ಹಾಕ್ತಾರೆ ದೀದಿ, ಕಣ್ಣು ಕಿಸಿದು ನೋಡುವ ಧೈರ್ಯ ಅದ್ಯಾವಾಗ ಪಡ್ಕೋತಾರೋ ಪುಣ್ಯಾತ್‌ಗಿತ್ತೀರು, ತಂದೆ ತಾಯಿ ಹಿರಿಯರು ಅಂದಮಾತ್ರಕ್ಕೆ ನಮ್ಮ ಜೀವನವನ್ನೇ ನಿರ್ಧರಿಸೋ ಅಧಿಕಾರ ಅವರದ್ದಲ್ಲ. ಮರ್ಯಾದೆ ಕೊಟ್ಟು, ಬಗ್ಗಿ ನಡೀತೇವೆ ಎಂದು ಬಗ್ಗಿದವರಿಗೊಂದು ಗುದ್ದು ಹೆಚ್ಚು ಎನ್ನುವ ರೀತಿ ಎಲ್ಲ ಗುದ್ದಿದರೆ, ಇವರೆಲ್ಲರ ಹಾಗೆ ನಮ್ಮ ಬೆನ್ನು ಚರ್ಮದ್ದೆ, ಮೂಳೆಯೂ ಇದೆ. ಈ ಹುಡುಗಿಯರಿಗೆ ಸಹಿಸೋ ಶಕ್ತಿ, ವ್ಯವಸ್ಥೆಗೆ ಹೊಂದಿಕೊಳ್ಳೋ ಶಕ್ತಿ ಹೆಚ್ಚಿರುವುದರಿಂದಲೇ ಇಷ್ಟೆಲ್ಲ ರಾಧ್ಧಾಂತ. ಸಹಿಸೋದಕ್ಕೂ ಒಂದು ಮಿತಿ ಇದೆ ಅಂತ ಯಾವಾಗ ತಿಳ್ಕೋತಾರೋ ದೀದಿ."

"ಮದುವೆ ಆಗೋದಾದ್ರೆ ನಂಗಿಷ್ಟವಾದ ವ್ಯಕ್ತಿಯೊಂದಿಗೆಂದು ನಾನು ತೀರ್ಮಾನಿಸಿಯಾಯ್ತು. ಈ

ಸಮಯದಲ್ಲಿ ಸರಿಯಾಗಿ ತೀರ್ಮಾನಿಸದಿದ್ದಲ್ಲಿ ಜೀವನ ನಾಟಕದಲ್ಲಿ ಸಂಪೂರ್ಣವಾಗಿ ಗ್ಲಿಸರೀನ್ ಅಗತ್ಯವೇ ಇಲ್ಲ, ಅಪ್ಪ, ಅಮ್ಮನಿಗೆ ಗೌರವ, ಪ್ರೆಸ್ಟೀಜ್‌ನ ಪ್ರಶ್ನೆ ಬರೋದು ನಾವು ನಮ್ಮಗಳ ದಾರಿ ಆರಿಸ್ಕೊಂಡ ಮೇಲೆ. ಮೊದಲೇ ನಮ್ಮ ಬಗ್ಗೆ ಯೋಚಿಸಿದ್ರೆ? ದೀದಿ, ನನ್ನ ಈ ಮನೆ ವ್ಯವಸ್ಥೆಗೆ ಹೊಂದಿಕೊಳ್ಳಲಾಗದೆ ಅದೆಷ್ಟು ಒದ್ದಾಡ್ತಿದೀನಿ, ಕೆಲವೊಮ್ಮೆ ಬೇಸರ ಬಂದ್ರೆ ಸಾಯಬೇಕು ಯಾರಿಗಾಗಿಷ್ಟೆಲ್ಲ ಕಷ್ಟಪಡುವುದೆಂದನಿಸುತ್ತಿತ್ತು. ಆದರೀಗ ಭಯವಿಲ್ಲ, ನನ್ನಿಷ್ಟದ ವ್ಯಕ್ತಿ ಸಿಕ್ಕಿದ್ದಾರೆ, ಯಾರಿಗೂ ಹೆದರೋದಿಲ್ಲ, ಆದದ್ದಾಗಲಿ, ಅಷ್ಟು ಕಟ್ಟಪ್ಪಣೆ ಮಾಡಿದ್ರೆ ಹೇಳ್ದೆ ಕೇಳ್ದೆ ಹೋಗಿಬಿಡ್ತೀನಿ. ಈ ಮನೆಯಲ್ಲಿದ್ರೂ ಅಷ್ಟೆ, ಸತ್ರು ಅಷ್ಟೆ. ಹುಡುಗಿ ಮನೆಬಿಟ್ಟು ಹೋದರೆ, ಆಕೆಯೇಕೆ ಹೋಗಿರಬಹುದು, ಏನು ನೋವಿದೆಯೆಂದು ಯಾರೂ ಯೋಚಿಸೋದಿಲ್ಲ, ಈ ಜನ, ಸಮಾಜ ಎಲ್ಲ ಓಡಿ ಹೋದವಳೆಂಬ ಹಣೆಪಟ್ಟಿ ಹಚ್ಚಿ, ಪ್ರತ್ಯೇಕ ದೃಷ್ಟಿ ... ಹೆಣ್ಣಿಗೆ ಹೆಣ್ಣೇ ಶತ್ರುವಾಗಿ ತಾತ್ಸಾರ ಮಾಡಿದರೆಂದೂ ಮುಂದೆಬರೋಲ್ಲ. ನನಗಂಥ ಹಣೆಪಟ್ಟಿ ಬಂದರೂ ಸರಿ, ಹೆದರೋದಿಲ್ಲ ದೀದಿ, ಮತ್ತದೇ ಬಾವಿಗೆ ಬೀಳಲಾರೆ, ನಿರ್ಧಾರವೆಂದರೆ ನಿರ್ಧಾರ."

ಮೌನವಾಗಿ ಶಾರಿಯ ಮಾತುಗಳನ್ನು ಆಲಿಸುತ್ತಿದ್ದವಳು ಆಕೆಯ ಧೈರ್ಯ ಕಂಡು ಆಶ್ಚರ್ಯಪಟ್ಟೆ. ಒಂದು ವಾರದಿಂದ ಇಂತಹುದೇ ಸಮಸ್ಯೆಯ ಶೃಂಖಲೆಯಲ್ಲಿ ಸಿಕ್ಕಿ ಒದ್ದಾಡುತ್ತಿದ್ದ ನನಗೆ ಶಾರದೆಯ ಆತ್ಮವಿಶ್ವಾಸ ತುಂಬಿದ ಮಾತುಗಳಿಂದ ಉತ್ತರ ದೊರಕಿದಂತಾಗಿ ನನ್ನ ಮನೆಯೆಡೆಗೆ ಖುಷಿಯಿಂದ ಹೆಜ್ಜೆ ಹಾಕಿದೆ.

**ಹಸೀನಾ ಮುಲ್ಲಾ**

---

# ಮಹಿಳೆಯರ ಕುರಿತು ಲೋಹಿಯಾ ಅವರ ವಿಚಾರಗಳು

ಪಾಪಕಾರ್ಯ ಪುಣ್ಯಕಾರ್ಯಗಳೆಂಬ ಹಣೆಪಟ್ಟಿ ಹಚ್ಚುವುದು ಇನ್ನು ಸಾಧ್ಯವಿಲ್ಲವೆನಿಸುತ್ತದೆ. ಆಧ್ಯಾತ್ಮಿಕತೆ ಪರಿಪೂರ್ಣ ಮತ್ತು ನೈತಿಕತೆ ಸಂಬಂಧಾವಲಂಬಿ ಎಂದು ನಾನು ನಂಬುತ್ತೇನೆ. ಪ್ರತಿ ವ್ಯಕ್ತಿಯೂ ತನ್ನದೇ ಆದ ನೈತಿಕತೆಯನ್ನು ಕಂಡುಕೊಳ್ಳಬೇಕಾಗುತ್ತದೆ.

ತನ್ನ ಇಡೀ ಬದುಕಿನಲ್ಲಿ ವಿವಾಹರಹಿತೆಯಾಗಿ ಒಂದು ಮಗುವಿಗೆ ಜನ್ಮಕೊಟ್ಟ ಹೆಂಗಸು, ಮತ್ತು ವೈವಾಹಿಕ ಜೀವನದಲ್ಲಿ ಅರ್ಧ ಡಜನ್ ಮಕ್ಕಳನ್ನು ಹಡೆದ ಹೆಂಗಸು, ಇವರಿಬ್ಬರಲ್ಲಿ ಯಾರದು ಉತ್ತಮ ನೈತಿಕತೆ? ಯಾರದು ಹೆಚ್ಚಿನ ಸಭ್ಯತೆ? ಹಾಗೆಯೇ ಮೂರು ಬಾರಿ ವಿವಾಹ ವಿಚ್ಛೇದನ ಪಡೆದು ನಾಲ್ಕನೇ ಬಾರಿ ಮದುವೆಯಾದ ಹೆಂಗಸು ಮತ್ತು ತನ್ನ ಹಿಂದಿನ ಎಲ್ಲಾ ಮೂರು ಹೆಂಡಂದಿರು ಸತ್ತ ಕಾರಣಕ್ಕಾಗಿ ನಾಲ್ಕನೇ ಮದುವೆಯಾದ ಗಂಡಸು ಇವರಿಬ್ಬರಲ್ಲಿ ಯಾರದು ಹೆಚ್ಚಿನ ಸಭ್ಯತೆ? ಯಾರದು ಉತ್ತಮ ನೈತಿಕತೆ?

ವಿಚ್ಛೇದಿತ ಮತ್ತು ಕಾನೂನುಬದ್ಧವಲ್ಲದ ಸಂಬಂಧಗಳು ಒಂದು ರೀತಿಯಲ್ಲಿ ಲೋಪ ಮತ್ತು ಸೋಲುಗಳಿಂದ ಕೂಡಿವೆ ಎಂಬುದನ್ನೂ ನಾನು ತಳ್ಳಿಹಾಕುವುದಿಲ್ಲ. ಆದರೆ ತೀರಾ ಸಹಜ ನಿಷ್ಠೆ ಗಂಡು-ಹೆಣ್ಣಿನ ಸಂಬಂಧದ ಸರಿಯಾದ ಕ್ರಮ. ಆದರೆ ಸಾಮಾನ್ಯವಾಗಿ ಗಂಡು-ಹೆಣ್ಣುಗಳು ದೋಷರಹಿತರಾಗಿರಲು ಒದ್ದಾಡುವುದರಿಂದ ಈ ಕ್ರಮದಲ್ಲಿ ಎಳೆ ತಪ್ಪುತ್ತದೆ.

ಹಾಗಾದರೆ ಮುಂದೇನು? ಒಂದು ವಿಧಿಬದ್ಧವಲ್ಲದ ಮಗು, ಅರ್ಧ ಡಜನ್ ವಿಧಿಬದ್ಧ ಮಕ್ಕಳಿಗಿಂತ ಹೆಚ್ಚು ಸಭ್ಯವಾದದ್ದು ಎನ್ನುವಲ್ಲಿ ನನಗೆ ಅನುಮಾನವೇ ಇಲ್ಲ. ಮೂರು ನಾಲ್ಕು ಹೆಂಡಂದಿರ ಅಥವಾ ಗಂಡಂದಿರ ಸಾವುಗಳಲ್ಲಿ ಎಲ್ಲವೂ ಆಕಸ್ಮಿಕವಾದವುಗಳಾಗಲು ಸಾಧ್ಯವಿಲ್ಲವೆನ್ನುವಲ್ಲಿಯೂ ಯಾವ ಅನುಮಾನವಿಲ್ಲ. ಇದು ಒಂದು ಬಗೆಯ ಅಸಡ್ಡೆಯಿಂದ ಆಗಿರಬಹುದು ಮತ್ತು ಇಂತಹ ಅಸಡ್ಡೆ ಮೂರು ಅಥವಾ ಹೆಚ್ಚು ವಿಚ್ಛೇದನಗಳಿಗೆ ಕಾರಣವಾದ ಸಂಘರ್ಷಣೆಗಳಿಗಿಂತ ಹೆಚ್ಚು ಅಸಭ್ಯವಾದದ್ದು.

ಇಂತಹ ನೈತಿಕತೆಗಳು ಇನ್ನು ಮಹತ್ವ ಪಡೆಯುತ್ತವೆ. ಅವಕ್ಕೆ ಒಂದು ಸಾರ್ವತ್ರಿಕ ಮಹತ್ವ ಈಗಾಗಲೇ ಸಿಕ್ಕಿದೆ. ಏಕೆಂದರೆ ನಾವು ಯಾವುದನ್ನಾದರೂ 'ಪಾಪ'ವೆಂದು ಕರೆಯುವುದಾದರೆ ಅದನ್ನು ಇಂದು ಮದುವೆ ಮತ್ತು ನಂತರದ ಸ್ಥಿತಿಗಳಿಗೆ ಹೇಳಬಹುದು. ವರದಕ್ಷಿಣೆ ತರದ ಹುಡುಗಿ ಇಂದು ಯಾತಕ್ಕೂ ಬಾರದವಳು, ಕರುವಿಲ್ಲದ ಹಸುವಿನಂತೆ.

ಒಪ್ಪಿಕೊಂಡಷ್ಟು ವರದಕ್ಷಿಣೆಯನ್ನು ಪೂರ್ತಿ ಕೊಡಲು ಸಾಧ್ಯವಾಗದೇ ಹೋದಾಗ ತಮ್ಮ ಹೆಣ್ಣುಮಕ್ಕಳು ಹೇಗೆ

… ತಂದೆ - ತಾಯಿಗಳು ಕಂಬನಿದುಂಬಿ ನನ್ನಲ್ಲಿ ಹೇಳಿದ್ದಾರೆ. ಇಲ್ಲಿ ಕಡಿಮೆ ಓದಿದ ಹೆಣ್ಣು ಹೆಚ್ಚು ಓದಿದ ಹೆಣ್ಣಿಗಿಂತ ಹೆಚ್ಚು ಭಾಗ್ಯವಂತೆಯಾಗುತ್ತಾಳೆ. ಏಕೆಂದರೆ ಅವಳ ವರದಕ್ಷಿಣೆ ದರ ಕಡಿಮೆ. ಕೃಷಿಯಲ್ಲಿ ಕೂಲಿಗಿಂತ ಗುತ್ತಿಗೆ ಉತ್ತಮವೆಂದಂತೆ.

ಇಂಡಿಯಾ ಇಂದು ವಿಕೃತಗೊಂಡಿದೆ. ಲೈಂಗಿಕ ಪಾವಿತ್ರ್ಯತೆಯನ್ನು ಕುರಿತು ಮಾತನಾಡುತ್ತಾ ಜನ ಲೈಂಗಿಕತೆ ಮತ್ತು ಮದುವೆಗಳ ವಿಚಾರದಲ್ಲಿ ಹೆಚ್ಚೆಚ್ಚು ಹೊಲಸಾಗುತ್ತಿದ್ದಾರೆ.

ವರದಕ್ಷಿಣೆ ಕೊಡುವುದಾಗಲೀ, ತೆಗೆದುಕೊಳ್ಳುವುದಾಗಲೀ ಶಿಕ್ಷಾರ್ಹ ಅಪರಾಧವಾಗಿದ್ದರೂ ಅದರ ಮೌಲ್ಯಗಳೆಲ್ಲ ಬದಲಾವಣೆಯಾಗಬೇಕಾಗಿದೆ ಹಾಗೆಯೇ ನಮ್ಮ ಮನಸ್ಸುಗಳೂ ಸಹ. ಫೋಟೋಗಳನ್ನು ತೋರಿಸಿಯೋ ಅಥವಾ ತೀರಾ ಮುಜುಗರದಿಂದ ಕುಸಿಯುತ್ತಾ ಹುಡುಗಿ ಟೀ ಕಪ್ಪನ್ನು ತರುವ ಮೂಲಕವೋ ನಿಶ್ಚಯ ಮಾಡುವ ಮದುವೆಗಳು ಹಿಂದೆ ಬ್ರಾಹ್ಮಣ ಅಥವಾ ಕ್ಷೌರಿಕನ ಮೂಲಕ ಗೊತ್ತು ಮಾಡುತ್ತಿದ್ದ ಮದುವೆಗಳಿಗಿಂತ ಹೆಚ್ಚು ಹಾಸ್ಯಾಸ್ಪದ. ಇದು ಒಬ್ಬ ವ್ಯಾಪಾರಿ ಗೊರಸುಗಳನ್ನು ಮುಟ್ಟಿನೋಡದೆ, ಹಲ್ಲುಗಳನ್ನು ಪರೀಕ್ಷಿಸದೆ ವ್ಯಾಪಾರಕ್ಕೆ ಬಂದ ಕುದುರೆಯನ್ನು ಕೊಂಡತಹ ಸ್ಥಿತಿ.

ಇಂಡಿಯಾ ತನ್ನ ಪುರಾತನ ರೀತಿಯನ್ನು ಬಿಟ್ಟು ಆಧುನೀಕರಣಗೊಳ್ಳದೆ ಬೇರೆ ದಾರಿಯೇ ಇಲ್ಲ.

ತಮ್ಮ ಮಗಳನ್ನು ಮದುವೆ ಮಾಡಿಕೊಡುವುದು ಖಂಡಿತವಾಗಿಯೂ ತಾಯ್ತಂದೆಯರ ಜವಾಬ್ದಾರಿ ಅಲ್ಲವೇ ಅಲ್ಲ, ಒಳ್ಳೆ ಶಿಕ್ಷಣ ಮತ್ತು ಆರೋಗ್ಯವನ್ನು ಕೊಡಿಸುವಲ್ಲಿ ಅವರ ಜವಾಬ್ದಾರಿ ಮುಗಿಯುತ್ತದೆ. ಒಬ್ಬ ಹುಡುಗಿ ತನಗಿಷ್ಟ ಬಂದ ಹುಡುಗನ ಸಹವಾಸ ಮಾಡಿದರೆ ಮತ್ತು ವಿಧಿಬದ್ಧತೆಯನ್ನು ಮೀರಿಹೋದರೆ ಅದು ಗಂಡು - ಹೆಣ್ಣಿನ ನಡುವೆ ಸಹಜ ಸಂಬಂಧವನ್ನು ನಿರ್ಮಾಣ ಮಾಡುವ ದಾರಿಯಾಗಿರುತ್ತದೆ. ಇದರಲ್ಲಿ ಯಾವ ಕಳಂಕವೂ ಇಲ್ಲ.

ಆದರೆ ಸಮಾಜ ಕ್ರೂರವಾಗಿದೆ. ಹೆಂಗಸರಂತೂ ವಿಪರೀತ ಕ್ರೂರಿಗಳಾಗಬಲ್ಲರು. ಒಬ್ಬ ಹೆಂಗಸು, ಮುಖ್ಯವಾಗಿ ಅವಿವಾಹಿತೆ, ಬೇರೆ ಬೇರೆ ಗಂಡಸರೊಡನೆ ಕಲೆತಾಗ ವಿವಾಹಿತ ಹೆಂಗಸರು ನಡೆದುಕೊಳ್ಳುವ ರೀತಿ, ಹುಟ್ಟಿಸುವ ಗಾಳಿಮಾತುಗಳು ತೀರಾ ಕಳವಳ ಹುಟ್ಟಿಸುವಂತಹವು. ಇಂತಹ ಕ್ರೂರ ಮನಸುಗಳಿರುವವರೆಗೂ ಗಂಡು ಮತ್ತು ಹೆಣ್ಣುಗಳ ಪ್ರತ್ಯೇಕೀಕರಣ ಕೊನೆಗೊಳ್ಳುವುದಿಲ್ಲ.

ಶ್ರೀಯುತ ವಿನೋಭಾಜಿಯವರು ಜನನ ನಿಯಂತ್ರಣ ಮತ್ತು ಜಾತಿಪದ್ಧತಿಗಳ ಮೇಲಿನ ಅಪವಿತ್ರತೆಯ ಕಲ್ಪನೆಯ ವಿಚಾರಗಳಿಂದ ತಮ್ಮ ಸದುದ್ದೇಶದ ಭೂದಾನ ಚಳುವಳಿಯನ್ನು ಭ್ರಷ್ಟಗೊಳಿಸಲಿದ್ದಾರೆ.

ಮೂರು ಮಕ್ಕಳನ್ನು ಪಡೆದ ಪ್ರತಿ ದಂಪತಿಗಳು ಜನನ ನಿಯಂತ್ರಣಕ್ಕೆ ಒಳಪಡಬೇಕು ಎಂದು ನಾನು ಬಲವಾಗಿ ನಂಬುತ್ತೇನೆ ಅಲ್ಲದೆ ಮಗುವಾಗುವುದನ್ನು ಇಷ್ಟಪಡದ ಯಾವುದೇ ಗಂಡಸು ಅಥವಾ ಹೆಂಗಸಿಗೆ, ಮದುವೆಯಾಗಿರಲಿ, ಇಲ್ಲದಿರಲಿ, ಗರ್ಭನಿರೋಧಕಗಳು ದೊರೆಯುವಂತಾಗಬೇಕು.

ಬ್ರಹ್ಮಚರ್ಯ ಒಂದು ಸೆರೆಮನೆ. ಕೌಮಾರತ್ವದಿಂದ ಬಂಧಿಸಿಟ್ಟ ಆತ್ಮಗಳು ಇಲ್ಲಿ ಅದರಿಂದ ಬಿಡುಗಡೆ ನೀಡುವವರಿಗಾಗಿ ಕಾಯುತ್ತಿರುತ್ತವೆ. ಹೀಗೆ ಬಂಧನದಲ್ಲಿದ್ದ ಶ್ರೀಯುತರಾದ ಜೆ. ಸಿ. ಕುಮಾರಪ್ಪನವರು, ಸದಾ ಪ್ರತ್ಯೇಕ ಗುಂಪುಗಳಲ್ಲಿರುವ ರಷ್ಯಾದ ಹುಡುಗ - ಹುಡುಗಿಯರೆಡೆಗೆ ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಾ ತಮ್ಮ ಸಂಸ್ಕೃತಿಯ ಸಾರ್ವಜನಿಕ ಪ್ರದರ್ಶನ ಮಾಡಿದರಲ್ಲ! ಆ ಹುಡುಗ ಹುಡುಗಿಯರು ಒಟ್ಟೊಟ್ಟಿಗೆ ಕಲೆತು ವಿಹರಿಸುವುದು ಬಹುಷಃ ಇವರ ಅರಿವಿಗೆ ಬಂದಿಲ್ಲದೇ ಹೋಗಿರಬಹುದು. ಇಲ್ಲಿ ಅವರು ತಮ್ಮ ಆತ್ಮವಿಮೋಚನೆಯ ಬಿಡುಗಡೆಯ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.

ಯುವಕ – ಯುವತಿಯರು ಇಂತಹ ಕ್ಷುಲ್ಲಕ ವಿಚಾರಗಳ ವಿರುದ್ಧ ಇದೀಗ ಸಿಡಿದೇಳಬೇಕಾಗಿದೆ. ಲೈಂಗಿಕತೆಗೆ ಸಂಬಂಧಿಸಿದಂತೆ ಎರಡು ಕ್ಷಮಾತೀತ ಅಪರಾಧಗಳಿವೆಯೆಂಬುದನ್ನು ಸದಾ ನೆನಪಿನಲ್ಲಿಟ್ಟರೆ ಸಾಕು. ಒಂದ- ಅತ್ಯಾಚಾರ, ಎರಡನೆಯದು ಸುಳ್ಳುಹೇಳುವುದು, ಇಲ್ಲವೇ ಕೊಟ್ಟ ಮಾತಿಗೆ ತಪ್ಪುವುದು, ಅಲ್ಲದೆ ಇನ್ನೊಬ್ಬರಿಗೆ ನೋವು ಮತ್ತು ಘಾಸಿ ಮಾಡುವಂತಹ ತಪ್ಪೂ ಇಲ್ಲಿ ಸಲ್ಲದೆ. ಆದಷ್ಟು ಮಟ್ಟಿಗೆ ಅದನ್ನು ರಕ್ಷಿಸಬೇಕು.

ಯುವಕ - ಯುವತಿಯರು ತಮ್ಮ ಪ್ರಾಮಾಣಿಕತೆ, ನಿಷ್ಟೆಗಳಿಗೆ ಕಳಂಕ ತಗುಲಿತೆಂದು ತಲ್ಲಣಿಸುವಾಗ, ನೀರನ್ನು ನಿರಾತಂಕವಾಗಿ ಹರಿಯ ಬಿಡಲಿಕ್ಕಾಗಿ ತುಂಬಿಕೊಂಡ ಕೊಳಕನ್ನು ತೆಗೆಯಲು ತಾವು ತೆತ್ತ ಬೆಲೆಯಿದೆಂದು ನೆನಪಿಟ್ಟುಕೊಳ್ಳಲಿ.

ಜಾತಿ ಮತ್ತು ಲಿಂಗ ಪ್ರತ್ಯೇಕೀಕರಣದ ಈ ಕೆಟ್ಟ ಚಾಳಿಯನ್ನು ನಾಶಮಾಡುವುದಕ್ಕಿಂತ ಹೆಚ್ಚಿನ ಪುಣ್ಯ ಕೆಲಸ ಇಂದು ಬೇರೊಂದಿಲ್ಲ. ಗಂಡು - ಹೆಣ್ಣಿನ ಸಂಬಂಧ ಅತ್ಯಂತ ಸೂಕ್ಷ್ಮ ಸ್ವರೂಪದಾದ್ದರಿಂದ ಇಲ್ಲಿ ನೋವು ಅಥವಾ ಘಾಸಿಯನ್ನುಂಟು ಮಾಡಬಾರದೆಂಬುದನ್ನು ಮಾತ್ರ ನೆನಪಿಟ್ಟುಕೊಳ್ಳಬೇಕು. ಆದರೆ ಎಲ್ಲಾ ಸಂದರ್ಭಗಳಲ್ಲೂ ಇದನ್ನು ತಪ್ಪಿಸಲು ಸಾಧ್ಯವಿಲ್ಲ, ಆದರೆ ಇಲ್ಲಿನ ಹೆಣಗಾಟ ಮಾತ್ರ ನಿರಂತರವಾಗಿರಬೇಕು.

ವಿ. ಗಾಯಿತ್ರಿ

---

ಓದುಗರಿಗೆ ಮಾರ್ಚ್ 8 — ಮಹಿಳಾ ದಿನಾಚರಣೆಯ ಶುಭಾಶಯಗಳು.

— ಮಾನಸ ಬಳಗ

ಮಾತ್ರೆಯಿಂದಲೇ ಈ ಪರಿಣಾಮಗಳುಂಟಾಗುತ್ತವೆ ಎನ್ನುವುದಕ್ಕೆ ಖಂಡಿತವಾದ ಪುರಾವೆಗಳಿಲ್ಲ, ಆದರೆ ಈ ಯಾವುದೇ ತೊಂದರೆಗಳು ಬಂದಲ್ಲಿ ಗುಳಿಗೆ ಕಾರಣವಿರಬಹುದೆಂದು ತಿಳಿಯುವುದು ಅವಶ್ಯಕ.

ರಕ್ತ ಪರಿಚಲನೆಗೆ, ರಕ್ತಹೆಪ್ಪುಗಟ್ಟುವಿಕೆಗೆ ಸಂಬಂಧಪಟ್ಟ ಖಾಯಿಲೆಯಿರುವವರು ಪಿತ್ತಜನಕಾಂಗದ ತೊಂದರೆಯಿರುವವರು, ಬಸಿರಿನ ಸಮಯದಲ್ಲಿ ಕಾಮಾಲೆಯಿಂದ ನರಳುವವರು ಸ್ತನಗಳ, ಪ್ರಜನನ ಕ್ರಿಯೆಗೆ ಸಂಬಂಧಿಸಿದ ಅಂಗಗಳ ಕ್ಯಾನ್ಸರ್ ಇರುವವರು, ಹಾಲೂಡಿಸುತ್ತಿರುವ ಮಹಿಳೆಯರು (ಮಾತ್ರೆಗಳು ಹಾಲನ್ನು ಕಡಿಮೆಗೊಳಿಸುವುದು, ಹಾಲಿನಲ್ಲಿನ ಪ್ರೋಟೀನ್, ಕೊಬ್ಬು ಕ್ಯಾಲ್ಸಿಯಂ ಅಂಶವನ್ನು ಕಮ್ಮಿಯಾಗಿಸುವುದು) ೭೫ ಹೀನತೆಯಿರುವವರು, ಗರ್ಭನಿರೋಧಕ ಮಾತ್ರೆಗಳನ್ನು ಉಪಯೋಗಿಸಬಾರದು.

ಮುಟ್ಟಿನ ೫ನೇ ದಿನದಿಂದ ಮಾತ್ರೆಯನ್ನು ತೆಗೆದುಕೊಳ್ಳಬೇಕು. ಊಟದೊಂದಿಗೆ ಅಥವಾ ಮಲಗುವ ಮುನ್ನ ತೆಗೆದುಕೊಳ್ಳುವುದೊಳಿತು. ತೆಗೆದುಕೊಳ್ಳುವುದನ್ನು ಮರೆತರೆ, ಜ್ಞಾಪಕ ಬಂದ ಕೂಡಲೆ ಎರಡನ್ನೂ ಒಟ್ಟಿಗೇ ತೆಗೆದುಕೊಳ್ಳಬೇಕು. ೨ಮಾತ್ರೆಗಳನ್ನು ಮರೆತಿದ್ದರೆ ಜ್ಞಾಪಿಸಿಕೊಂಡ ಕೂಡಲೆ ಎರಡನ್ನು ಒಟ್ಟಿಗೆ ತೆಗೆದುಕೊಳ್ಳಬೇಕು. ೩ ಅಥವಾ೩ಕ್ಕಿಂತ ಹೆಚ್ಚು ಮಾತ್ರೆಗಳನ್ನು ಮರೆತರೆ, ತೆಗೆದುಕೊಳ್ಳುವುದನ್ನು ನಿಲ್ಲಿಸಿ. ೭ ದಿನಗಳ ನಂತರ ಹೊಸದಾಗಿ ಶುರುಮಾಡಬೇಕು. ಒಂದೆರಡು ಮಾತ್ರೆಗಳನ್ನು ಮರೆತು ಮುಟ್ಟಾಗದಿದ್ದಲ್ಲಿ, ಗರ್ಭಿಣಿಯರು ಗಾಬರಿಯಾಗಬೇಕಿಲ್ಲ, ಆದರೂ ಪರೀಕ್ಷಿಸಿಕೊಳ್ಳುವುದೊಳಿತು (ಬೇರೆ ಮಾತ್ರೆ ಬೇಕೆ ಎಂದು).

ಈ ಗರ್ಭ ನಿರೋಧಕ ಮಾತ್ರೆಗಳು ಸಂಪೂರ್ಣವಾಗಿ ಮಹಿಳೆಯ ಜವಾಬ್ದಾರಿ. ವೈದ್ಯರನ್ನು ಕಂಡು ಪರೀಕ್ಷಿಸಿಕೊಂಡು, ಮಾತ್ರೆ ತೆಗೆದುಕೊಳ್ಳುವುದನ್ನು ಮರೆಯದೆ, ತೊಂದರೆ ಉಂಟಾದಲ್ಲಿ ಸರಿಪಡಿಸಿಕೊಳ್ಳುವ— ಎಲ್ಲಾ ಜವಾಬ್ದಾರಿಯೂ ಮಹಿಳೆಯ ಮೇಲಿದೆ. ಅರ್ಥ ಮಾಡಿಕೊಳ್ಳುವ, ಸಹಾಯ ಮನೋಭಾವದ ಬೇರೆ ಜನನ ನಿಯಂತ್ರಣ ವಿಧಾನವನ್ನು ಒಪ್ಪಿಕೊಳ್ಳುವ ಸಂಗಾತಿಗಳು ಇದ್ದರೆ ಜವಾಬ್ದಾರಿಯು ಖಂಡಿತವಾಗೂ ಹೊರೆಯಾಗುವುದಿಲ್ಲ.

ಅಪಾಯಕಾರಿ ಇ. ಪಿ. ಫೋರ್ಟ್ [illegible] ಮಾತ್ರೆ ಅಥವಾ ಇಂಜಕ್ಷನ್‌ನನ್ನು ಗರ್ಭ ಪಾತ ಮಾಡಿಸಿಕೊಳ್ಳಲು ಬಳಸುತ್ತಾರೆ. ೧೯೮೨ರಲ್ಲಿ ಈ ಔಷಧವನ್ನು ನಿಷೇಧಿಸಲಾಯ್ತು. ಪಾಶ್ಚಿಮಾತ್ಯ ದೇಶಗಳಲ್ಲಿ ಇದರ ಉಪಯೋಗ ಎಂದೋ ಸಮಾಪ್ತಿಯಾಯಿತು. ದುರಂತವೆಂದರೆ ನಮ್ಮದೇಶದಲ್ಲಿ ಈಗಲೂ ಈ ಮಾತ್ರೆ ಹಾಗೂ ಇಂಜಕ್ಷನ್ ಬಹಳ ಸುಲಭವಾಗಿ ವೈದ್ಯರ ಚೀಟಿಯೂ ಇಲ್ಲದೆ ದೊರಕುತ್ತವೆ. ಈ ಔಷಧದಿಂದಾಗಿ ವಿರೂಪಾಂಗ ಮಕ್ಕಳು ಜನಿಸುತ್ತವೆಯೆಂದು, ಕ್ಯಾನ್ಸರ್ ರೋಗ ಕೂಡ ಬರಬಹುದೆಂದು, ಹುಟ್ಟಿದ ಶಿಶು ನಪುಂಸಕವಾಗುವ ಸಾಧ್ಯತೆಗಳಿವೆಯೆಂದು ಸಂಶೋಧನೆಗಳಿಂದ ತಿಳಿದುಬಂದಿದೆ. ಈ ಔಷಧವು ಗರ್ಭಪರೀಕ್ಷೆಗೂ ಯೋಗ್ಯವಲ್ಲವೆಂದು, ವೈದ್ಯ ವಿಜ್ಞಾನದಲ್ಲಿ ಇದರಿಂದಾವ ಪ್ರಯೋಜನವು ಇಲ್ಲವೆಂದು ಪಾಶ್ಚಾತ್ಯ ತಜ್ಞರು ಖಡಾಖಂಡಿತವಾಗಿ ಹೇಳಿದ್ದಾರೆ.

ಮಹಿಳೆಯ ಆರೋಗ್ಯಕ್ಕೆ ಮಾರಕವಾಗಿರುವ ಈ ಔಷಧದ ಉಪಯೋಗವನ್ನು ಸಂಪೂರ್ಣವಾಗಿ ತಡೆಯಬೇಕು. ನಿಷೇಧದ ಬಗ್ಗೆ ತಿಳಿದಿರುವವರು ವಿಷಯ ತಿಳಿಯದ ಅನೇಕ ಮಹಿಳೆಯರಿಗೆ ತಿಳಿಸುವ ಮೂಲಕ ಅಪಾಯವನ್ನು ತಡೆಗಟ್ಟುವ ಪ್ರಯತ್ನಮಾಡಬೇಕು.

ಕೃಪೆ : ಅವರ್ ಬಾಡೀಸ್ ಅಂಡ್ ಅವರ್‌ಸೆಲ್ವ್ಸ್

**ಸರಸ್ವತಿ ದು.**

---

## ದ್ವಂದ್ವ

ತುಂಬಿದ
ಸಭಾದಾಗ
ದ್ರೌಪದಿ ನಿನ್ನ
ಸೀರಿ ಸೆಳೆದಾಗ
ಅಕ್ಷಯಾಂಬರ ನೀಡಿ
ರಕ್ಷಿಸಿದ ಕೃಷ್ಣ
ಗೋಕುಲದಾಗ
ಎಷ್ಟು ಮಂದಿ

ಸೀರಿ ಕದ್ದು
ಗೋಳು ಹೊಯ್ದು
ನಿನಗ ಗೊತ್ತಾ?

ಡಿ. ವಿ. ಬಡಿಗೇರ.

... ತಂದೆ - ತಾಯಿಗಳು
ಕಂಬನಿದುಂಬಿ ...

ಕ್ಷತ್ರಿಯ ತತ್ವಗಳಾದ ಶೌರ್ಯ, ಗೌರವದ ಹಿನ್ನೆಲೆಯಲ್ಲಿ ಹುಟ್ಟು ಪಡೆದ ಈ ಸಂಪ್ರದಾಯ ಕಾಲಕ್ಕೆ ತಕ್ಕಂತೆ ಮಾರ್ಪಾಡಾಗಿ ಆಸ್ತಿಹಕ್ಕು ಬೇಡುವ ಹೆಣ್ಣನ್ನು ಧಾರ್ಮಿಕವಾಗಿ ನಿವಾರಿಸಿಬಿಡುವ ಅಸ್ತ್ರವಾಯಿತು.. ಕುಲೀನ ಬ್ರಾಹ್ಮಣ ಮನೆತನಗಳಲ್ಲಿ ಇದು ವ್ಯಾಪಕವಾಗಿತ್ತು.

**ಬ್ರಿಟಿಷರು :** ಸತಿ ಆಚರಣೆ ಬಹಿಷ್ಕರಿಸುವ ಚಳುವಳಿ ಬ್ರಿಟಿಷರ ಕಾಲದಲ್ಲಿ ಆರಂಭ. ಸ್ಥಳೀಯ ಸಂಪ್ರದಾಯಗಳ ಮಧ್ಯ ಪ್ರವೇಶಿಸದಂತಹ ಮುಸ್ಲಿಮರ ನೀತಿಯನ್ನೇ ಬ್ರಿಟಿಷರು ಅನುಸರಿಸಿದರೂ ಅನೇಕ ಕೆಳಹಂತದ ಅಧಿಕಾರಿಗಳು ಈ ಆಚರಣೆ ನಿಷೇಧಿಸಲು ಕ್ರಾಂತಿಕಾರಕ ಕ್ರಮ ಕೈಗೊಂಡರು.

ಉದಾಹರಣೆಗೆ ಷಹಾಬಾದ್‌ನ ಕಲೆಕ್ಟರ್ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಸತಿ ನಿಷೇಧಿಸಿ ಆದೇಶ ಹೊರಡಿಸಿದ. ಈ ಆದೇಶಕ್ಕೆ ಸರಕಾರದ ಅಂಗೀಕಾರ ಪಡೆಯುವುದಕ್ಕಾಗಿ ೧೭೮೯ರಲ್ಲಿ ಸರಕಾರಕ್ಕೆ ಪತ್ರವನ್ನೂ ಬರೆದ. ತನ್ನ ಆದೇಶದ ಜಾರಿಗಾಗಿ ಜನರ -ಮೇಲೆ ಬಲಾತ್ಕಾರ ಬಳಸಬಾರದೆಂದು ಸರಕಾರ ಕಲೆಕ್ಟರ್‌ಗೆ ಉತ್ತರಿಸಿತ್ತು.

೧೮ನೇ ಶತಮಾನದ ಅಂತ್ಯದಲ್ಲಿ ಕಲ್ಕತ್ತದಲ್ಲಿ ಸತಿಯನ್ನು ಬಹಿಷ್ಕರಿಸಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರು ಆದೇಶ ಹೊರಡಿಸಿದರು, ಕಲ್ಕತ್ತದಲ್ಲಿ ಸತಿ ಆಚರಣೆಯಲ್ಲಿ ಪಾಲ್ಗೊಳ್ಳುವವರನ್ನು ಕೊಲೆ ಆರೋಪಿಗಳಾಗಿ ಪರಿಗಣಿಸಬೇಕೆಂದೂ ಅವರು ಆದೇಶಿಸಿದರು.

ಇದೇ ಸಂದರ್ಭದಲ್ಲಿ ನಿಜಾಮತ್ ಆದಾಲತ್‌ನಲ್ಲಿ ಪಂಡಿತ ಗುರುಶ್ಯಾಂ ಸರ್ಮನ್ ನೆರವಿನೊಂದಿಗೆ ಆಂಗ್ಲನೊಬ್ಬ ಅಧಿಕಾರಿಯೊಬ್ಬರು "ಸತಿ" ಪದ್ಧತಿಯ ಒಳಿತು - ಕೆಡಕುಗಳ ಮೌಲ್ಯಮಾಪನ ನಡೆಸಿದರು, ಹಾಗೂ ಸಹಗಮನ ಹಿಂದೂ ಧಾರ್ಮಿಕ ನಂಬಿಕೆಗೆ ಅನುಸಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಇದರಿಂದ ಧಾರ್ಮಿಕ ಹಿನ್ನೆಲೆಯಲ್ಲಿ ಸತಿಗೆ ಅಂಗೀಕೃತೆ ಸಿಕ್ಕಿತು. ಆದರೆ ಕೆಲವು ಸಂದರ್ಭಗಳಲ್ಲಿ ಬಸಿರಾಗಿದ್ದರೆ, ಎಳೆಯಳಾಗಿದ್ದರೆ, ಎಳೆಮಗುವಿನ ತಾಯಿಯಾಗಿದ್ದರೆ, ಸ್ವಚ್ಛತೆ ಇಲ್ಲದವಳಾಗಿದ್ದರೆ, ಮಾದಕ ವಸ್ತು ಸೇವನೆ ಅಮಲಿನಲ್ಲಿದ್ದರೆ ಸತಿ ಆಚರಣೆ ಕೂಡದು. ಸತಿ ಆಚರಣೆ ಬಲಾತ್ಕಾರವಾಗಬಾರದು, ಸ್ವಇಚ್ಛೆಯದಾಗಿರಬೇಕೆಂದೂ ಘೋಷಿಸಲಾಯಿತು.

ಈ ಶಿಫಾರಸುಗಳನ್ನು ಆಧರಿಸಿಯೇ ರೂಪಿಸಲಾದ ಸತಿ ಬಗೆಗಿನ ಬ್ರಿಟಿಷ್ ನೀತಿ, ಕಾನೂನುಬದ್ಧ ಹಾಗೂ ಕಾನೂನು ವಿರೋಧಿ ಸತಿ ಎಂದು ಸ್ಪಷ್ಟವಾಗಿ ವರ್ಗೀಕರಿಸಿತು. ಆದರೆ ಈ ನೀತಿಯಲ್ಲಿ ಅಂತರ್ಗತ ದೋಷಗಳಿದ್ದವು. ಯಾವ ಸಂದರ್ಭಗಳಲ್ಲಿ ಸತಿ ತಡೆಯಬೇಕೆಂದು ನಿರ್ಧರಿಸುವುದೇ ಕಠಿಣವಾಗುತ್ತಿತ್ತು.

೧೮೧೨ರಲ್ಲಿ ಈ ಆದೇಶವನ್ನು ಪುನರ್‌ವಿಮರ್ಶಿಸಲಾಯಿತು. ನಂತರ ತಮ್ಮ ಅತ್ತಿಗೆ ಸತಿಯಾಗುವುದನ್ನು ಕಣ್ಣಾರೆ ಕಂಡಿದ್ದ ರಾಜಾರಾಮ್ ಮೋಹನ ರಾಯ್ ನಾಯಕತ್ವದಲ್ಲಿ ನಡೆದ ಸತತ ಹೋರಾಟದ ಫಲವಾಗಿ ಲಾರ್ಡ್ ಬೆಂಟಿಂಕ್ ೧೮೨೯ರಲ್ಲಿ ಸತಿ ಆಚರಣೆಯನ್ನು ಪೂರ್ಣವಾಗಿ ಬಹಿಷ್ಕರಿಸಿದ.

೧೫೦ ವರ್ಷಗಳ ಹಿಂದೆಯೇ ಸತಿ ಬಹಿಷ್ಕರಿಸಲಾಗಿದ್ದರೂ, ಆಧುನಿಕ ಭಾರತದ ಗ್ರಾಮಗಳಲ್ಲಿ ಸತಿ ಪದ್ಧತಿ ಜೀವಂತವಾಗಿ ಉಳಿದುಬಂದಿದೆ. ಇತ್ತೀಚಿನ ದಿಯೋರಾಲಾದ ರೂಪ್ ಕನ್ವರ್‌ಳ ಸತಿ ಘಟನೆ— ವಿವಾದವನ್ನು ಮತ್ತೆ ಜೀವಂತವಾಗಿಸಿದೆ. ಪುರಿ ಶಂಕರಾಚಾರ್ಯರಂತಹವರು, ಸತಿಯನ್ನು ಬೆಂಬಲಿಸಿ ಪ್ರೋತ್ಸಾಹಿಸುವ ಅಪಾಯಕಾರಿ ಅಲೆ ವ್ಯಾಪಕವಾಗಿದೆ.

ಈಗ ನಿರ್ದಿಷ್ಟ ಐತಿಹಾಸಿಕ ಸಂದರ್ಭದಲ್ಲಿ "ಸತಿ" ಸಂಸ್ಕೃತಿ ಪರ ವಾದವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ, ಹೆಣ್ಣಿನ ಬಗ್ಗೆ ಹೊಂದಿರುವ ದೃಷ್ಟಿಕೋನವನ್ನು ಬಿಂಬಿಸುತ್ತದೆ. ಶತಮಾನಗಳಿಂದಲೂ ಹೆಣ್ಣು ಇಲ್ಲಿ ಅಸ್ತಿತ್ವವಿಲ್ಲದ ಸ್ವಾತಂತ್ರ್ಯ ಇಲ್ಲದವಳು ದಮನಕ್ಕೆ ಒಳಗಾದ ಇತಿಹಾಸವುಳ್ಳವಳು.

# ಕರ್ನಾಟಕದಲ್ಲಿ ಮಹಿಳಾ ದಿನಾಚರಣೆ

ಮಾರ್ಚ್ 8 — ಮಹಿಳೆಯರ ಹೋರಾಟಕ್ಕೆ ದನಿಯಾದ ದಿನ. ಅಂದಿನಿಂದ ನಮ್ಮ ಹೋರಾಟ ಸಾಗಿಯೇ ಬರುತ್ತಿದೆ. ಹೋರಾಟ - ಅನ್ಯಾಯದ ವಿರುದ್ಧ, ಅಸಮಾನತೆಯ ವಿರುದ್ಧ ಬದುಕನ್ನು ಜೀವಂತವಾಗಿಸಲು. ಗುರಿ ಸುಲಭದ್ದಲ್ಲ, ಹೋರಾಟಕ್ಕೆ ನಮ್ಮೆಲ್ಲರ ದನಿಯೂ ಸೇರಿದಾಗಲೇ ಜಯಘೋಷ ಮೊಳಗಲು ಸಾಧ್ಯ. ಮಾರ್ಚ್ 8 – ಹೋರಾಟಕ್ಕೆ ಕೈ ಸೇರಿಸಿದವರೆಲ್ಲ ಒಂದಾಗುವ ಸಂತಸದ ದಿನ. ಈ ದಿನದ ಅಂಗವಾಗಿ ಬೆಂಗಳೂರಿನ ಮಹಿಳಾ ಸಂಘ ಸಂಸ್ಥೆಗಳು ಅನೇಕ ಕಾರ್ಯಕ್ರಮಗಳನ್ನೇರ್ಪಡಿಸಿದ್ದರು.

ವಿಮೆನ್ಸ್ ವಾಯ್ಸ್ ಸಂಸ್ಥೆಯವರು 'ಸಮಾಜ ಮತ್ತು ಮಹಿಳೆಯರ ಮೇಲೆ ಮದ್ಯಪಾನದ, ಪರಿಣಾಮ ಕುರಿತಾಗಿ ಪುರಭವನದಲ್ಲಿ ಒಂದು ಸಭೆಯನ್ನೇರ್ಪಡಿಸಿದ್ದರು. ಸಮಾಜ ಕಲ್ಯಾಣ ಸಚಿವ ಸಿಂಧ್ಯಾ, ಪೊಲೀಸ್ ಅಧಿಕಾರಿಣಿ ಜೀಜಾ ಹರಿಸಿಂಗ್ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಮದ್ಯಪಾನದ ನಿಷೇಧಕ್ಕೆ, ಸಮಸ್ಯೆಯನ್ನು ತಿಳಿದವರೆಲ್ಲಾ ಹೋರಾಡಬೇಕೆಂದು ವಿಮೆನ್ಸ್ ವಾಯ್ಸ್ ಸಂಸ್ಥೆಯವರು ಕರೆಯಿತ್ತರು.

ವಿಮೋಚನಾ ಮಹಿಳಾ ವೇದಿಕೆಯವರು ಮಾರ್ಚ್ 8ರಂದು ಅನೇಕ ಕಾರ್ಯಕ್ರಮಗಳನ್ನಿಟ್ಟುಕೊಂಡಿದ್ದರು.

ವಸತಿ ಸಮಸ್ಯೆ ಕುರಿತಾಗಿ ಬೀದಿನಾಟಕ, ಮಹಿಳಾ ಕೃತಿಗಳ (ಗದ್ಯ. ಕವಿತೆ, ಕಥೆ) ಪ್ರದರ್ಶನ, ಫ್ಯಾಮಿಲಿ ಕೋರ್ಟಿನಲ್ಲಿ ನಿಧಾನ ಗತಿಯಲ್ಲಿ ಇತ್ಯರ್ಥವಾಗುವ ಕೇಸುಗಳ ಕುರಿತಾಗಿ ಒಂದು ಕಿರು ರೂಪಕ. ಅನುಭವ, ಕಥೆ,ಕವನಗಳನ್ನ ಹಂಚಿಕೊಳ್ಳುವ ಸಮಾರಂಭ– ಈ ಅನೇಕ ಕಾರ್ಯಕ್ರಮಗಳನ್ನು ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ (ಶಿವಾಜಿ ನಗರ, ಶರೀಫ್ ಗಾರ್ಡನ್ ಎಂ. ಜಿ. ರಸ್ತೆ, ಕೋರ್ಟ್ ಕಾಂಪ್ಲೆಕ್ಸ್) ಏರ್ಪಡಿಸಿದ್ದರು. ಇದರ ಜೊತೆಗೆ, ಇತ್ತೀಚೆಗೆ ಇತ್ಯರ್ಥವಾದ ಭೋಪಾಲ್ ಗ್ಯಾಸ್ ದುರಂತದ ತೀರ್ಪನ್ನು ಹಾಗು ಅನಂತನ ಅವಾಂತರ ಚಿತ್ರದ ಅಶ್ಲೀಲ ಧೃಶ್ಯ ಹಾಗು ಸಂಭಾಷಣೆಯನ್ನು ಖಂಡಿಸಿ ಯೂನಿಯನ್ ಕಾರ್ಬೈಡ್ ಕಛೇರಿಯ ಮುಂದೆ, ಕಲ್ಪನ ಚಲನ ಚಿತ್ರ ಮಂದಿರದ ಮುಂದೆ ಪ್ರತಿಭಟನೆ ಸೂಚಿಸಿದರು. ಶಿವಾಜಿನಗರದ ಬಸ್ ನಿಲ್ದಾಣದ ಎದುರಿನ ಗೋಡೆಯ ಮೇಲೆ ಮಹಿಳೆಯರ ಭಾವನೆಗಳನ್ನು ಪದ್ಯ ಬರವಣಿಗೆ, ಚಿತ್ರ ರಚನೆಯ ಮೂಲಕ ಬರೆಯುವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು.

"ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ" ಯವರು ಪ್ರಜಾಪ್ರಭುತ್ವ ಮತ್ತು ಮಹಿಳೆಯ ಹಕ್ಕುಗಳನ್ನು ಕುರಿತಾಗಿ ಕಾನೂನು ಕಾಲೇಜಿನಲ್ಲಿ ಒಂದು ಸಭೆಯನ್ನೇರ್ಪಡಿಸಿದ್ದರು. ಆರ್. ಪೂರ್ಣಿಮಾರವರು "ಮಹಿಳಾ ಚಳುವಳಿಗೆ ಪ್ರಜಾಪ್ರಭುತ್ವ ಎಷ್ಟು ಸಮರ್ಪಕ"ವೆಂದು ತಿಳಿಸಿದರು. ಡಾ॥ ಸುನಂದ ಕುಲಕರ್ಣಿಯವರು "ವೈದ್ಯಕೀಯ ಹಾಗೂ ಆರೋಗ್ಯ ಕ್ಷೇತ್ರದಲ್ಲಿ" ಅಸಮಾನತೆ ಹಾಗು ಮಹಿಳೆಯರ ಹಕ್ಕು ಏನು ಎಂದು ಮಾತನಾಡಿದರು.

ವಕೀಲ ನಾಗಮೋಹನ ದಾಸರವರು "ಪ್ರಜಾಪ್ರಭುತ್ವ ನೀಡಿರುವ ಹಕ್ಕುಗಳು ಎಷ್ಟು ಉಪಯುಕ್ತ ಹಾಗು ದಿನನಿತ್ಯದ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕೆಂಬುದರ ಬಗ್ಗೆ ಮಾತನಾಡಿದರು.

ದಿನಾಂಕ 9.3.89ರಂದು ಮಹಿಳಾ ಸಂಘ ಸಂಸ್ಥೆಗಳು (ಮಹಿಳಾ ಸಂಘರ್ಷ ಒಕ್ಕೂಟ) ಕಾನೂನು ಕಾಲೇಜಿನ ಬಯಲಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. 'ಜಾಯಿಂಟ್ ವುಮೆನ್ಸ್ ಪ್ರೋಗ್ರಾಮ್' ಮಹಿಳಾ ಸಂಘದವರಿಂದ ಹಾಡುಗಳು, 'ವಿಮೆನ್ಸ್ ವಾಯ್ಸ್' ಮಹಿಳಾ ಸಂಸ್ಥೆಯವರಿಂದ ಹಾಡು ಹಾಗು ಕೋಲಾಟ' 'ವಿಮೋಚನಾ ಮಹಿಳಾ ವೇದಿಕೆ' ಯವರಿಂದ ವಸತಿ ಸಮಸ್ಯೆ ಕುರಿತು ಬೀದಿನಾಟಕ' ನೃತ್ಯ, 'ಮಾನಿನಿ' ಮಹಿಳಾ ಸಂಘದವರಿಂದ "ಸತಿ" ನಾಟಕ 'ಸ್ವಾದ' ಸಂಸ್ಥೆಯವರಿಂದ ಹಾಡುಗಳಿದ್ದವು.

ದಿನಾಂಕ 11-3-89ರಂದು ಜಾಯಿಂಟ್ ವಿಮೆನ್ಸ್ ಪ್ರೋಗ್ರಾಂನವರು "ರಾಷ್ಟ್ರೀಯ ಯೋಜನೆಯಲ್ಲಿ (ಮಹಿಳೆಯರಿಗಾಗಿ) ಮಹಿಳಾ ಸಂಸ್ಥೆಗಳ ಪಾತ್ರ" ಬಗ್ಗೆ ವಿಚಾರ ಸಂಕಿರಣವನ್ನಿರಿಸಿದ್ದರು.

ಜಾಜಿ ಮುಂದಣ್ಣನವರು "ಕನ್ಸುಮರ್ ಪ್ರೊಟೆಕ್ಷನ್ ಸೊಸೈಟಿ" ಬಗ್ಗೆ ಮಾತನಾಡಿದರು. "ಶಿಕ್ಷಣ ಕ್ಷೇತ್ರದಲ್ಲಿ ಮಹಿಳಾ ಸಂಸ್ಥೆಗಳ ಪಾತ್ರ" ಕುರಿತಾಗಿ ಇಂದಿರಾ ಸ್ವಾಮಿನಾಥನ್‌ರವರು – ಶಿಕ್ಷಣತಜ್ಞೆ ಮಾತನಾಡಿದರು. ಆರೋಗ್ಯಕ್ಕೆ ಸಂಬಂಧಪಟ್ಟಂತೆ ಮಹಿಳಾಸಂಸ್ಥೆಗಳ ಪಾತ್ರ - ಕುರಿತಾಗಿ ಡಾ॥ ಮೈಕೇಲ್ (ಬಾಪ್‌ಟಿಸ್ಟ್ ಆಸ್ಪತ್ರೆ) ಮಾತನಾಡಿದರು. ಜಾಯಿಂಟ್ ವಿಮೆನ್ಸ್ ಪ್ರೂಗ್ರಾಂನ ಸಾಂಸ್ಕೃತಿಕ ಸಂಘವಾದ "ಜನಧಾರಿ" ಯವರಿಂದ "ಪುಣ್ಯಕೋಟಿ"ಯೆಂಬ ಬೀದಿನಾಟಕವಿತ್ತು.


ಡಾ॥ ಉಷಾರಾವ್ (ಇನ್ಸ್ಟಿಟ್ಯೂಟ್ ಫಾರ್ ಸೋಶಿಯಲ್ ಅಂಡ್ ಇಕನಾಮಿಕಲ್ ಚೇಂಜ್) ಮಹಿಳಾ ಸಂಸ್ಥೆಗಳು

"ಜಾಗೃತಿ ಮಹಿಳಾ ಅಧ್ಯಯನ ಸಂಸ್ಥೆ" ಯವರು 11-3-89ರಂದು ತ್ರಿವೇಣಿ ಕೃತಿಗಳ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಎಸ್. ಎಂ. ಕೆ. ಆರ್. ವಿ. ಕಾಲೇಜಿನ ತಿರುಮಲಾಂಬ ಭವನದಲ್ಲಿ ಏರ್ಪಡಿಸಿದ್ದರು.

ಸಂಘದ ಸದಸ್ಯೆ ನೇಮಿಚಂದ್ರರವರು ವಿಚಾರ ಸಂಕಿರಣದ ಉದ್ದೇಶವನ್ನು ವಿವರಿಸಿದರು. ತ್ರಿವೇಣಿ ಕೃತಿಗಳನ್ನು ಕುರಿತ ಲೇಖನಗಳ ಪುಸ್ತಕವನ್ನು ಸಾಹಿತಿ ಚದುರಂಗರವರು ಬಿಡುಗಡೆ ಮಾಡಿದರು. ವಿದ್ಯಾವರ್ಧಕ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಗೀತಾರವರು ತ್ರಿವೇಣಿ ಕೃತಿಗಳ "ಮಿತಿ ಹಾಗೂ ಮಹತ್ವ"ದ ಬಗ್ಗೆ ಮಾತನಾಡಿದರು. ಬೆಂಗಳೂರು ವಿಶ್ವ ವಿದ್ಯಾಲಯದ ಕನ್ನಡ ವಿಭಾಗದ ಉಪನ್ಯಾಸಕರು ಶ್ರೀ ನಾರಾಯಣರವರು "ತ್ರಿವೇಣಿ ಕೃತಿಗಳಲ್ಲಿ ವಿವಾಹ ಸಂಸ್ಥೆ" ವಿಷಯದ ಬಗ್ಗೆ ಮಾತನಾಡಿದರು. "ಚಲನಚಿತ್ರ ಹಾಗು ತ್ರಿವೇಣಿ [illegible] ಕುರಿತಾಗಿ ಚಲನ ಚಿತ್ರ ನಿರ್ದೇಶಕ ಕೃಷ್ಣಸ್ವಾಮಿಯವರು ಮಾತನಾಡಿದರು.

ಮಾರ್ಚ್ 8 ನಮಗೆ ಎಂದರೆ ಮಾನವಿ ಬಳಗದವರಿಗೆ ನಿಜಕ್ಕೂ ಸುದಿನ. ಈ ತಿಂಗಳಿನಿಂದ, ತಿಂಗಳ ಪತ್ರಿಕೆಯಾದ ನಮ್ಮ ಪತ್ರಿಕೆ "ಮಾನಸ" ಎಂಬ ಹೊಸ ಹೆಸರಿನೊಂದಿಗೆ ಈಗಾಗಲೆ ನಿಮ್ಮ ಕೈ ಸೇರಿದೆ. ಮಾರ್ಚ್ 8ರಂದೆ ನಿಮಗೆ ತಲುಪಿಸಬೇಕೆಂಬ ಉದ್ದೇಶದಿಂದ ಹೆಚ್ಚು ಶ್ರಮ ವಹಿಸಿ ಪತ್ರಿಕೆ ತಂದೆವು. ಈ ನಮ್ಮ ಹೊಸ ಪ್ರಯತ್ನಕ್ಕೆ ನಿಮ್ಮೆಲ್ಲರ ಸಲಹೆ, ಸಹಕಾರ, ಹಾರೈಕೆಯೊಂದಿಗೆ ನಮ್ಮ ಶ್ರಮವು ಸೇರಿದೆ. ಮುಂದೆಯೂ ಪತ್ರಿಕೆಯನ್ನು ಸಮರ್ಪಕವಾಗಿ ತರಲು ನಿಮ್ಮಿಂದ ಆರ್ಥಿಕ, ನೈತಿಕ ಬೆಂಬಲ ಹಾಗು ಪ್ರೋತ್ಸಾಹ ಅಗತ್ಯ, ಒದಗುವುದೆಂಬ ನಂಬಿಕೆ, ಭರವಸೆ ನಮಗಿದೆ.

ನಿಮಗೆಲ್ಲರಿಗೂ ಮಾನವಿ ಬಳಗದವರಿಂದ ಮಹಿಳಾ ದಿನಾಚರಣೆಯ ಶುಭಾಶಯಗಳು.



## ಸಂವೇದನೆ

ಹಳ್ಳಿಗಳಲ್ಲಿ ಹೆಂಗಸರನ್ನು ಕಲೆಹಾಕಿ, ಮಹಿಳೆಯರ ಪ್ರಶ್ನೆಯನ್ನು ಕುರಿತು ಸಂವಾದ ಬೆಳೆಸುವುದು ಸಮಸ್ಯೆಗಳ ಅಪಾರತೆಯ ದೃಷ್ಟಿಯಿಂದ ಸುಲಭಸಾಧ್ಯ ಎಂದು ಕಂಡರೂ, ಸಾಂಸ್ಕೃತಿಕ ದೃಷ್ಟಿಯಿಂದ ಸಾಮಾಜಿಕ ಒಳರಚನೆಯ ದೃಷ್ಟಿಯಿಂದ ತೀರಾ ಕಷ್ಟದ್ದು, ಅತಿ ಸೂಕ್ಷ್ಮ. ತಿಂಗಳಿನ ಹತ್ತು ದಿನಗಳನ್ನಾದರೂ ಹೀಗೆ ಅವರನ್ನು ಸಣ್ಣ ಶಿಬಿರಗಗಳಲ್ಲಿ ಕಲೆಹಾಕಿ ಅವರೊಟ್ಟಿಗೆ ಸಂವಾದದಲ್ಲಿ ತೊಡಗುವ ನನಗೆ ಪ್ರತಿ ಶಿಬಿರವೂ ಒಂದು ಸವಾಲಾಗಿರುತ್ತದೆ, ಕೊನೆಗೆ ಒಂದು ಅನುಭವವಾಗಿ ನಿಲ್ಲುತ್ತದೆ.

ಬಿಜಾಪುರದಿಂದ ಸಿರಾದವರೆಗೆ ಒಬ್ಬೊಬ್ಬರದೂ ಒಂದೊಂದು ಕಥೆ. ಅಪ್ರಜ್ಞಾಪೂರಕವಾಗಿಯೇ ತೀರಾ ಸಹಜ ರೀತಿಯಲ್ಲಿ ಸಮಸ್ಯೆಯ ಸಾಂಸ್ಕೃತಿಕ–ರಾಜಕೀಯ ಆಯಾಮುಗಳನ್ನು ತೆರೆದಿಡುತ್ತಾ, ನಿಧಾನಕ್ಕೆ ಅತ್ಯಂತ ನಿಧಾನಕ್ಕೆ ಸತ್ಯಗಳನ್ನು ಪರೀಕ್ಷಿಸುತ್ತಾ, ಹಿಡಿಯುತ್ತಾ ಹೋಗುತ್ತಾರೆ. ಕೊನೆಯಲ್ಲಿ ಹೊಸತೇನೋ ಹೊಳೆದಂತೆ ಗಂಭೀರ-ಉತ್ಸುಕರಾಗುತ್ತಾರೆ. ನಂತರದ ದಿನಗಳಲ್ಲಿ ಕೆಲವರಂತೂ ಅಚ್ಚರಿ ಹುಟ್ಟಿಸುವಷ್ಟು ದಿಟ್ಟೆಯರಾಗಿ, ಜಾಣೆಯರಾಗಿ ಬೆಳೆಯುತ್ತಾರ ಮತ್ತೆ ಕೆಲವರು ಅಷ್ಟೇ ದುರ್ಬಲರಂತೆ, ನಿರಾಸಕ್ತರಂತೆ ಇದ್ದುಬಿಡುತ್ತಾರೆ. ಇವೆಲ್ಲದರ ನಡುವೆ ಇಣುಕುಹಾಕುವ ಅತ್ಯಂತ ಸಹಜ – ಸರಳ ಸತ್ಯಗಳು ಮಾತ್ರ ಒಮ್ಮೊಮ್ಮೆ ದ್ವಂದ್ವಕ್ಕೆ ತಳ್ಳುತ್ತವೆ, ನಿಜಾರ್ಥದಲ್ಲಿ ನನಗೆ ಶಿಕ್ಷಣ ಕೊಡುತ್ತವೆ.

ಮೊನ್ನೆ ಒಂದು ಹಳ್ಳಿಯಲ್ಲಿ ಹೀಗೆ ಸೇರಿದ್ದ ಶಿಬಿರದಲ್ಲಿ ಕಾಲೇಜು ಹುಡುಗಿಯರು, ಸಮಾಜ ಕಾರ್ಯಕರ್ತೆಯರು, ಹಳ್ಳಿಯ ಹೆಂಗಸರು ಎಲ್ಲ ಒಂದು ೩೫ ಮಂದಿ ಇದ್ದರು. ಸುಮಾರು ೩೫-೪೦ ವರ್ಷದವಳಿರಬಹುದಾದ ಓಬಳವ್ವ ಹೇಳಿದ್ದಕ್ಕೆಲ್ಲಾ ತಲೆದೂಗುತ್ತಾ, ಪ್ರಾರಂಭದಿಂದಲೂ ಒಂದು ಬಗೆಯಲ್ಲಿ "ವಿರಕ್ತೆ"ಳಾಗಿಯೇ ಇರುತ್ತಾ ಬಂದಳು. ಈ ಹೆಂಗಸನ್ನು ಹೇಗಾದರೂ ಶಿಬಿರದ ಭಾಗವಾಗಿಸಬೇಕೆಂದು ಹೆಣಗುತ್ತಿದ್ದೆ. ಏನು ಕೇಳಿದರೂ "ನಂಗೇನೂ ತಿಳಿಯಾಕಿಲ್‌ಕಳವ್ವ," "ನೀ ಯೊಳೋದೆಲ್ಲಾ ಸರೀಗೈತ್ ನನ್‌ತಾಯಿ", "ಈ ತಲೀಗೊಂದೊಸಿ ಎಂಗಾರ ಗ್ನಾನ ತುಂಬು" ಎಂದೆಲ್ಲಾ ಹೇಳುತ್ತಾ ಮರುಮಾತಾಡದಂತೆ ಸಮಾಧಾನ ಮಾಡಿಬಿಡುತ್ತಿದ್ದಳು. ತನ್ನ ಬಗ್ಗೆ ಸ್ಪಷ್ಟ ನಿಲುವು ತಾಳದಂತೆ ಮಾಡಿಬಿಡುತ್ತಿದ್ದಳು.

ಮಾರನೆಯದಿನ ನಾನು ಸ್ನಾನಮಾಡಿ ಸೀರೆಯುಡುತ್ತಿದ್ದಾಗ, ಚಿಲಕವಿಲ್ಲದ ರೂಮಿನ ಬಾಗಿಲನ್ನ ಮೆಲ್ಲಗೆ ತಳ್ಳಿ "ಒಳೀಗ್ ಬರ್ಲ್ಲಾ ತಾಯಿ" ಎಂದು ನನ್ನ ಉತ್ತರ ಬೇಕಾಗಿಲ್ಲ ಎನ್ನುವಂತೆ ನೇರ ಒಳಬಂದಳು ಓಬಳಮ್ಮ. ತಕ್ಷಣ "ಬಾಗ್ಲು ಹಾಕು ಓಬಳಮ್ಮ" ಅಂದೆ. ನಾನಿನ್ನೂ ಪೂರ್ತಿ ಸೀರೆ ಉಟ್ಟಿರದಿದ್ದ ಪ್ರಜ್ಞೆ ಹೇಳಿಸಿದ ಮಡಿವಂಕೆ ಮಾತಾಗಿತ್ತದು. "ಬುಡ್‌ತಾಯಿ ಅದ್ರಾಗೇನೈತೆ, ನೀ ಒಂದು ಸೀರೆ ಕೊಡ್ ನನ್ಗೆ ನಾ ನಿನ್ನೆದುರ್ಗೆ ಈ ಸೀರೆ ಬಿಚ್ಚಾಕಿ ಉಡಾಕಿಲ್ವ ಕೇಳು" ಎಂದು ಸೆರಗನ್ನು ಬೀಸಿ ತೆಗೆದು ಸೀರೆ ಬಿಚ್ಚುವಂತೆ ನಟಿಸಿದಳು ಎರಡನೇ ದಿನಕ್ಕೂ ಮುಂದುವರೆದ ಒರಟು ನೂಲಿನ ಸೀರೆ ಅದು. "ತಿಂಡಿ ತಿಂದಾ ಓಬಳಮ್ಮ" ಅಂದೆ ಕನ್ನಡಿ ನೋಡಿ ಕುಂಕುಮವಿಡುತ್ತಾ, ಹೂಂ ಅಂದಳೊ ಉಹೂಂ ಅಂದಳೋ ತಿಳಿಯಲಿಲ್ಲ. ಕತ್ತೆತ್ತಿ ಮುಖ ನೋಡಿದಾಗ ಅವಳ ಕಣ್ಣೆಲ್ಲಾ ನಾನು ಉಟ್ಟಿದ್ದ ಒಂದು ನುಣ್ಣನೆ ನೈಲಾನ್ ಸೀರೆ ಮೇಲೆ ಕೂತಿತ್ತು. "ಅತ್ತಿ ಸೀರೆ ಉಡಾಕಿಲ್ವೇನವ್ವ ನೀನು" ಅಂದಳು. "ಬಸ್ ಪ್ರಯಾಣಕ್ಕೆ ಇಂತದೇ ಸೀರೆ ಒಳ್ಳೇದಂತ ಉಟ್ಕೋತೀನಿ" ಅಂದೆ. "ಎಷ್ಟು ಸೀರೆ ಐತ್‌ತಾಯಿ ನಿನ್‌ತಾವ" ಎಂದು ಅಲ್ಲೇ ಇದ್ದ ನನ್ನ ಬ್ಯಾಗನ್ನ ಯಾವ ಮುಜುಗರವೂ ಇಲ್ಲದೆ ಶೋಧಿಸತೊಡಗಿದ್ದಳು. "ಎಲ್ಲೋ ಮೂರ್ನಾಕು ಇರ್ಬೇಕು" ಎಂದೆ. "ಊರ್ನಾಗೆ ದಾಸ್ತಿ ಇರ್ಬೇಕು" ಎಂದುಊಹಿಸಿ ಮಾತನಾಡಿದಳು. ಶೋಧನೆ ಮುಗಿಸಿ "ಎಲ್ಲಾ ಚಂದಾಕವೆ ಎಷ್ಟು ಬೆಲೇವು ತಾಯಿ" ಎಂದು ಕುತೂಹಲಿಸಿದಳು.

ಗಿದ್ದು ನನಗೆ ಹಿಂಸೆ ಅನ್ನಿಸಹತ್ತಿತ್ತು. ಗುಂಪಿನಲ್ಲಿ ಮಾನಾಡಲು ಸಾಧ್ಯವಾಗದ ಮುಜುಗರ, ಹಿಂಜರಿಕೆಗಳಿಂದ ನನ್ನೊಟ್ಟಿಗೆ ವೈಯಕ್ತಿಕವಾಗಿ ಎಂತದೋ ಗಂಭೀರ ಮಾತಿಗೆ ಬಂದಿರಬಹುದು ಇವಳು ಎಂದು ಊಹಿಸಿದ್ದೆ. ಶಿಬಿರಗಳಲ್ಲಿ ಹೆಂಗಸರು ಸಾಮಾನ್ಯವಾಗಿ ಹೀಗೆ ಮಾಡುವುದು ವಾಡಿಕೆ. ಏನೋ ಕೇಳಬೇಕೆಂದುಕೊಂಡು "ಓಬಳಮ್ಮಾ, ನೀನು ..........." ಎಂದು ಮಾತು ತೆಗೆದೆ, ತಕ್ಷಣ ಮಾತು ತಡೆದಳು ತಡೆದಳೆನ್ನುವುದಕ್ಕಿಂತ ಕೇಳಿಸಿಕೊಳ್ಳುವ ಗೋಜಿಗೆ ಹೋಗದೆ ಮಾತನಾಡತೊಡಗಿದಳು "ನಂಗೊಂದ್‌ಸೀರೆ ಕೊಡ್ತಾಯಿ, ನಿನ್ನೆ ಸ್ರೇಳಿ ಒಂದೊಳ್ಳೆ ಸೀರೆ ಉಟ್ಕಾತೀನಿ" ತುಂಬಾ ನೇರವಾಗಿ ಒಂಚೂರು ಸುತ್ತುಬಳಸು, ಮುಜುಗರವಿಲ್ಲದೆ ಕೇಳಿದ್ದಳು ಓಬಳಮ್ಮ, ತಕ್ಷಣಕ್ಕೆ ತುಂಬಾ ಕಸಿವಿಸಿಯಾಯಿತು. "ಓಬಳಮ್ಮಾ ನಿನ್ನ ಉದ್ದೇಶ ಇಷ್ಟೇನಾ ? ದಟ್ಟ ಅನುಭವದ ನಿನ್ನ ಬದುಕಿನ ಸತ್ಯ, ಸುಳ್ಳುಗಳನ್ನೆಲ್ಲಾ ನಿಜಚಿಂತನೆಯ ಒರೆಗೆ ಹಚ್ಚಿ, ದೊಡ್ಡ ಸತ್ಯಗಳನ್ನು ಹಿಡಿಯುವ ದಾರಿ ಹಿಡಿಯುಬೇಕು ನೀನು ಎಂದು ನಾನು ಬಯಸಿದ್ದೆ, ಅದಕ್ಕಾಗಿ ನಿನ್ನನ್ನ ಸನ್ನದ್ಧಗೊಳಿಸಬಲ್ಲೆ ಎಂದೆಲ್ಲಾ ತಿಳಿದಿದ್ದೆ. ನೀನೆಷ್ಟು ಪ್ರೀತಿಯಿಂದ ಮಾತನಾಡಿದ್ದೆ ನನ್ನ ಮೇಲೆ ಅದೆಲ್ಲಾ ಬರೀ ಸೀರೆಗಾಗಿಯಾ? ಎಂದು ತುಂಬಾ ನಿರಾಸೆಯಾಯಿತು.

ಹೀಗೆ ನೋವಿನಲ್ಲಿ ನಾನು ಮಾತಾಡದಿದ್ದಾಗ ಓಬಳಮ್ಮ ಜಾಗ ಖಾಲಿ ಮಾಡಿದ್ದಳು. ಹಾಗೇ ಕುಳಿತು ಯೋಚಿಸತೊಡಗಿದ್ದೆ. ಆದರೂ ಒಬ್ಬ ಬಡ ಹೆಂಗಸಿಗೆ ಜೀವನದಲ್ಲಿ ಒಂದು ಒಳ್ಳೆಯ ಸೀರೆ ಉಟ್ಟುಕೊಳ್ಳಬೇಕೆಂಬ ಆಸೆ ಎಷ್ಟೊಂದು ಉತ್ಕಟವಾಗಿರುತ್ತದೆ! ಎಷ್ಟು ಯಥಾರ್ಥವಾದದ್ದು ಅದು! ನಾನು ಅವಳಿಗೆ ಒಂದು ಸೀರೆ ಖಂಡಿತಾ ಕೊಡಬಹುದಾಗಿತ್ತು. ಎಂತಹ ಆಸೆಗಣ್ಣಿನಿಂದ ನನ್ನ ಸೀರೆ ನೋಡಿದ್ದಳು, ಎಷ್ಟೊಂದು ಆಸೆಯಿಂದ ಕೇಳಿದ್ದಳು. ಒಬ್ಬ ಬಡ ಹೆಂಗಸಿನ ತೀರಾ ಸಹಜವಾದ ಒಂದು ಆಸೆಯನ್ನು ಪೂರೈಸಲಾಗದಿದ್ದ ಮೇಲೆ ಅದಕ್ಕಿಂತ ದೊಡ್ಡದನ್ನೇನು ನನ್ನ ಶಿಬಿರ ಸಾಧಿಸಬಲ್ಲುದು ಅಂತಲೂ ಅನ್ನಿಸಿತ್ತು.

ಅವತ್ತೆಲ್ಲಾ ಓಬಳಮ್ಮನನ್ನು ವಿಶೇಷವಾಗಿ ಗಮನಿಸತೊಡಗಿದ್ದೆ. ಆದ್ದರಿಂದಲೆಯೋ ಏನೋ ನನ್ನ ಮಾತುಗಳಿಗೆಲ್ಲಾ ತಲೆದೂಗುವ ಆಕೆಯ ನೋಟ ಹೆಚ್ಚು ತೀಕ್ಷ್ಣಗೊಂಡಿದೆ ಎಂದುಕೊಳ್ಳುತ್ತಿದ್ದೆ. ನೇರವಾಗಿ ನನ್ನ ಕಣ್ಣುಗಳನ್ನೇ ದಿಟ್ಟಿಸುತ್ತಿದ್ದಾಳೆ ಅನ್ನಿಸುತ್ತಿತ್ತು. ಅವಳು ಸೀರೆ ಕೇಳಿದ್ದು ಹೇಗಾದರೂ ಸುಳ್ಳಾಗಲಿ ಅಂತಲೇ ಎಲ್ಲಾ ಕ್ಷಣಗಳಲ್ಲೂ ಅಂದುಕೊಳ್ಳುತ್ತಿದ್ದೆ.

ಮಾರನೆಯ ದಿನ ನಾನು ಹೊರಡುವಾಗ ಆ ಹೆಂಗಸರಲ್ಲೆಲ್ಲಾ ಅದೆಂಥಾ ಸಂಭ್ರಮ! ಪ್ರತಿಯೊಬ್ಬರೂ ಎಲೆಯಡಿಕೆ. ಎರಡೆರಡು ಬಾಳೆ ಹಣ್ಣುಗಳಿಂದ ನನ್ನ ಕೈತುಂಬಿ, ಕೈಹಿಡಿದು ಮುದ್ದಿಸಿ ಹೋಗುತ್ತಿದ್ದರು.ಓಬಳಮ್ಮನ ಇರುವಿಕೆಯ ಬಗ್ಗೆ ವಿಶೇಷವಾಗಿ ಎಚ್ಚರಿದ್ದ ಕಾರಣ ಅವಳ ಸುಳಿವು ಇಲ್ಲದೇ ಇದ್ದುದನ್ನೂ ಗಮನಿಸಿಕೊಂಡಿದ್ದೆ ಅವಳಿಗೊಂದು ಸೀರೆ ಕೊಟ್ಟುಬಿಡಬೇಕಾಗಿತ್ತು ಎಂದು ಪರಿತಪಿಸುವುದರ ಜತೆಗೆ ನಾನಿಲ್ಲಿ ಸೀರೆ ಹಂಚಲು ಬಂದಿಲ್ಲ, ಅದರಿಂದ ಯಾವ ಮಹಾಕಾರ್ಯವನ್ನೂ ಸಾಧಿಸಿದಂತಾಗುವುದಿಲ್ಲ. ನನ್ನನ್ನು ಹಾಗೆ ತಿಳಿದುಕೊಂಡದ್ದು ಅವಳ ತಪ್ಪು ಎಂದು ಸಮಾಧಾನಿಸಿಕೊಳ್ಳುತ್ತಿದ್ದೆ. ನುಣುಪಿನ ನೈಲಾನ್ ಸೀರೆಗಾಗಿ ಅವಳ ಆಸೆ ತುಂಬಾ ಸಹಜವಾದದ್ದಾದರೂ ಕೊನೇಪಕ್ಷ ಇಲ್ಲಾದರೂ ಅವಳು ಸೀರೆಗಾಗಿ ದೀನಳಾಗಬಾರದಿತ್ತು ಎಂದು ಪದೇ ಪದೇ ಅಂದುಕೊಳ್ಳುತ್ತಿದ್ದೆ. ಆದರೂ ನಮ್ಮಂತಹವರ ಗುರಿಗಳೊಟ್ಟಿಗೆ ಓಬಳಮ್ಮನಂತಹವರ ಗುರಿಗಳನ್ನೂ ನಾವು ಎಳೆದೊಯ್ಯುತ್ತೇವೆಯೇನೋ ಅನ್ನಿಸಹತ್ತಿತ್ತು. ನನ್ನಿಂದ ಸೀರೆಯೊಂದನ್ನು ಪಡಕೊಳ್ಳುವುದು ಅವಳ ಗುರಿಯಾಗಬೇಕೆಂದು ನಾನು ಯೋಚಿಸಲೂ ಸಾಧ್ಯವಿರಲಿಲ್ಲ. ಏನೇ ಆದರೂ ತಾನೊಂದು ಒಳ್ಳೆ ಸೀರೆ ಉಡಬೇಕೆಂಬ ಓಬಳಮ್ಮನ ಆಸೆಯನ್ನು ಕ್ಷುದ್ರವಾದದ್ದೆಂದು ತಳ್ಳಿಹಾಕಲು ಆಗಲೇ ಇಲ್ಲ. ಅಷ್ಟರಲ್ಲೇ ಓಬಳಮ್ಮ ಬಂದಿದ್ದಳು. ಕೈಯಲ್ಲಿ ಎರಡು ದೊಡ್ಡ ಕಲ್ಲಂಗಡಿ ಹಣ್ಣಿನ ಚೂರುಗಳನ್ನು ಹಿಡಿದು, ಹಣ್ಣಿನ ಹೋಳುಗಳಿಂದ ನನ್ನ ಕೈತುಂಬಿ ಹೇಳಿದಳು, "ನೀ ಇದ್ನ ತಿನ್ನು ತಾಯಿ ನಿನ್ನೊಟ್ಟೆ ತಣ್ಗಿರ್ಬೇಕು", ತಕ್ಷಣ ಏನೋ ಹೇಳಲು ಹೋಗಿ "ಇದನ್ನ ತರಕ್ ಹೋಗಿದ್ಯಾ ಓಬಳಮ್ಮ?" ಅಂದೆ ಪೆಕರುಪೆಕರಾಗಿ, "ನಾ ಇನ್ನೇನ್ ಕೊಟ್ಟೇನ್ ಬುಡವ್ವ ಎಣ್ಣೆಂಗ್ಸು ಬದುಕ್‌ಬೋಕು, ಎಂಗ್ ಬದುಕ್‌ಬೋದು ಅಂತ ಅಸ್ಟ್ ಪೈನಾಗಿ ತಿಳಿಸ್‌ಕೊಟ್ಟೆ ನೀನು, ಕಲ್ತಕಂಡ ಇದ್ದಾ ತಾಯಿ ಕೊನೀವರ್ಗೂ ಉಳಿಯಾದು, ಕಟ್ಕೊಟ್ ಬುತ್ತೀ ಅಲ್ಲ" ಎನ್ನುತ್ತಾ ನನ್ನ ಎರಡೂ ಕೈಗಟ್ಟಿಯಾಗಿ ಹಿಡಿದು ಮುದ್ದಿಸಿದಳು. ಬಹುಷಃ ನೀನು ಕೊಡಬ

ಹುದಾಗಿದ್ದ ಸೀರೆಗಿಂತ ನೀನು ನಡೆಸಿದ [illegible] ಉಪಯುಕ್ತ ಎಂದು ಹೇಳಲು ಓಬಳಮ್ಮ ಹೀಗೆ ಹೇಳುತ್ತಿದ್ದಾಳೇನೋ ಎಂದು ಆಕ್ಷಣ ಅಂದುಕೊಂಡು ತುಂಬಾ ಸಮಾಧಾನ ಪಟ್ಟುಕೊಂಡೆ. ಅವಳ ಆಕ್ಷಣದ ವರ್ತನೆಗೆ ಅಂತದೇ ಅರ್ಥಕಟ್ಟುವುದು ಬಹುಷಃ ನನ್ನ ಕಳಕಳಿಯಾಗಿತ್ತೇನೋ!

ಎಷ್ಟೋ ದಿನಗಳ ನಂತರ ಈಗ ಅಂದುಕೊಳ್ಳುತ್ತೇನೆ, ಓಬಳಮ್ಮ ಈಗ ಏನು ಮಾಡುತ್ತಿರಬಹುದು ನನ್ನ ನೈಲಾನ್ ಸೀರೆಯನ್ನು ಕನಸಿನಲ್ಲಿ ಉಟ್ಟು [illegible] ನೈಲಾನ್ ಸೀರೆ ಕೊಂಡುಕೊಂಡೇ ತೀರಬೇಕೆಂದು ಗಂಡನ ಕಣ್ಣುತಪ್ಪಿಸಿ ಹಣ ಕೂಡಿಹಾಕುತ್ತಿರಬಹುದೇ? ಅಥವಾ ಕಣ್ಣು ಸೋಲಿಸುವ ರಂಗುಗಳನ್ನು ಮೀರಿದ ಅಖಂಡ ಬಿಳಿಯೊಂದು ಮೈಲಿಗಳಾಚೆ ಹೊಳೆಯುತ್ತಿಯುತ್ತಿರುವುದನ್ನ ಹಿಡಿದು ಅದನ್ನ ತಲುಪಲು ಬೀಸುಗಾಲು ಹಾಕುತ್ತಿರಬಹುದೇ?

ವಿ. ಗಾಯತ್ರಿ

---

# ಓದುಗರ ವಿಭಾಗ

ಸ್ತ್ರೀಯರ ಮೇಲೆ ನಡೆಯುವ ಅನ್ಯಾಯ, ಅತ್ಯಾಚಾರ, ನೋವುಗಳಿಗೆ ದನಿ ನೀಡುವ ನಿಮ್ಮ ಉದ್ದೇಶ ನನಗೆ ತುಂಬಾ ಮೆಚ್ಚುಗೆಯಾಗಿದೆ. ಮುಖ್ಯವಾಗಿ ಇದಕ್ಕೆ ನಿಮ್ಮಂತಹ ಪತ್ರಕರ್ತರ ನೆರವಿಲ್ಲದೆಯೆ ನನ್ನಂತಹವರು ಒಂಟಿಯಾಗಿ ಹೋರಾಡುವುದು ಕಷ್ಟ. ನಾನು ಇಂತಹ ಒಂದು ಅವಕಾಶಕ್ಕಾಗಿ ಬಹಳ ದಿನಗಳಿಂದಲೂ ಕಾಯುತ್ತಿದ್ದೆ.

ಸಂಧ್ಯಾರಾಣಿ
ಕನಕಪುರ

ನಿಮ್ಮ ಪ್ರಯತ್ನ ಹಾಗೂ ಸಾಹಸಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ,

ಎನ್. ಎಸ್. ಸೀತಾರಾಂ
ಅರಸೀಕೆರೆ

ತಮ್ಮ ಪತ್ರಿಕೆಯನ್ನು ಓದಿ ಬಹಳ ಸಂತೋಷವಾಯಿತು. ಸ್ತ್ರೀಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಕುರಿತು ಪತ್ರಿಕೆಯು ದನಿಗೂಡಿಸಿದ್ದಕ್ಕಾಗಿ ಧನ್ಯವಾದಗಳು.

ನಾಗೇಶ ಸಜ್ಜನ
ಮುದ್ದೆಬಿಹಾಳ, ವಿಜಾಪುರ

"ಗಾಂಧಿ ದೃಷ್ಟಿಯಲ್ಲಿ ಹೆಣ್ಣು" ಎಂಬ ಲೇಖನದ ಕೊನೆಯಲ್ಲಿ "ತನ್ನ ಜಾತಿಯಲ್ಲದ ಹುಡುಗಿಯನ್ನು ವಿವಾಹ ಮಾಡಿಕೊಂಡ ತಪ್ಪನ್ನು ಹಿಂದುಗಳ ದೇವರು ಕ್ಷಮಿಸುವನೆಂದು ತಿಳಿಯಬಯಸುತ್ತೇನೆ." ಗಾಂಧಿ ಬಗ್ಗೆ ಪ್ರೀತಿ ಇದೆ. ಆದರೆ ನಮ್ಮೆಗಳಿಗೆಲ್ಲ ಆದರ್ಶವಾದವನ್ನು ಬೋಧಿಸುವ ಇವರು ಹಿಂದೂಗಳ ದೇವರು, ಮುಂತಾಗಿ ಹೇಳಿರುವುದು ಖಂಡನಾರ್ಹ· ಏಕೆಂದರೆ ಹಿಂದೂಗಳ ದೇವರು, ಬೌದ್ಧರ ದೇವರು ಕ್ರೈಸ್ತರ ದೇವರು ಮುಂತಾಗಿ ಬರೆಯುತ್ತಾ ಹೋಗಿ ಜನ ಸಮೂಹದಲ್ಲಿ ಪ್ರತ್ಯೇಕತೆಯ ಬೀಜವನ್ನು ಬಿತ್ತುವುದು ಸರಿಯೇ?

ಎಚ್. ಎನ್. ನಾಗರಾಜ್,
ತುಮಕೂರು.

ತಾವು ಪತ್ರಿಕೆ ಹೊರಡಿಸುತ್ತಿರುವುದು ನಮಗೆ ಹಾಗೂ ನಮ್ಮ ಸಂಘಕ್ಕೆ ಅತ್ಯಾನಂದವಾಗಿದೆ. ಯಶಸ್ವಿಯಾಗಲೇಬೇಕು ನಿಮ್ಮ ಪತ್ರಿಕೆ. ತಮ್ಮಂಥ ಯುವತಿಯರು ಮುಂದೆ ಬಂದರೆ ಏನನ್ನಾದರೂ ಸಾಧಿಸಬಹುದು.

ಇ. ಶಶಿಕಾಂತ
ಮಂಗಳ ಕಲಾಸಾಹಿತ್ಯ ವೇದಿಕೆ
ಕವಿತಾಳ.

ಪತ್ರಿಕೆಗಳು ಹೊರಬರುವುದೇ ಕಷ್ಟಸಾಧ್ಯನಾ ಪರಿಸ್ಥಿತಿಯಲ್ಲಿ, ನಿಮ್ಮ ಸಾಹಸ ಹಾಗೂ ಮನೋಭಾ ಮೆಚ್ಚತಕ್ಕದ್ದು.

ಡಿ. ಕೆ. ಸ್ವಾಮಿ
ದೊಡ್ಡಪೇಟೆ, ಚಿತ್ರದುಗ

ಶೋಷಣೆ ನಡೆಯುತ್ತಿದೆ. ಇಂತಹ ಪತ್ರಿಕೆ ಬೆಳಕಿಗೆ ಬರುತ್ತಿರುವುದು ಕಂಡು ತುಂಬ ಸಂತಸವಾಯಿತು.

ವಿಶ್ವಪ್ರಿಯ
ರಂಗಂಪೇಟೆ.

...ಲು ನಿಮ್ಮ ಪತ್ರಿಕೆಯ ಪ್ರಯತ್ನ ಸ್ವಾಗತಾರ್ಹ. ಈ ಪ್ರಯತ್ನದಲ್ಲಿ ನಿಮಗೆ ಯಶ ದೊರೆಯಲಿ ಎಂದು ಹಾರೈಸುತ್ತೇನೆ.

ಎಸ್. ಪ್ರತಿಭಾ
ಬೆಂಗಳೂರು

ಮಹಿಳೆಯರ ಮೇಲೆ ನಡೆಯುವ ಯಾವತ್ತೂ ಅನ್ಯಾಯಗಳನ್ನು ಬೆಳಕಿಗೆ ತರುವ ಹಾಗೂ ಅದಕ್ಕೊಂದು ಪರಿಣಾಮಕಾರಿ ತಿರುವನ್ನು ಕೊಡಬಯಸುವ ನಿಮ್ಮ ಪತ್ರಿಕೆ ಒಂದು ಸ್ತುತ್ಯ ಪ್ರಯತ್ನ. ಇದಕ್ಕೆ ನಮ್ಮೆಲ್ಲರ ಸಹಕಾರ ಬೆಂಬಲ ಇದ್ದೇ ಇದೆ.

ಮೋಹನ್ ಕೋಟ್ಯಾನ್
ಮಣಿಪಾಲ.

ಶೋಷಿತ ಮಹಿಳೆಯ ನೋವಿಗೆ ದನಿ ನೀಡಲಿ

ಈ ಪತ್ರಿಕೆ ಮನುಷ್ಯನಲ್ಲಿ ಮಾನವೀಯತೆಯನ್ನು ಮೂಡಿಸಲಿ ಮತ್ತು ಪ್ರತಿಯೊಬ್ಬ ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆ, ದೌರ್ಜನ್ಯದ ವಿರುದ್ಧ ಧೈರ್ಯದಿಂದ ಅವರಿಗೆ ಬೆಂಬಲವಾಗಿ ನಿಲ್ಲಲಿ ಎಂದು ಹಾರೈಸುವ,

ಕೆ. ಗೀತಾ ಕುಮಾರಿ
ಕಂಬ್ಳದಡ್ಡ, ವೇಣೂರು.

ಪ್ರಿಯ ಓದುಗರೇ,

'ಮಾನವಿ' ಹೆಸರಿನಲ್ಲಿ ನಮ್ಮ ಪತ್ರಿಕೆಗೆ ನೋಂದಾವಣೆಗೆ ಹೆಸರು ಸಿಗೆದ ಕಾರಣ "ಮಾನಸ", ಎಂಬ ಹೆಸರಿನಲ್ಲಿ ಮಾರ್ಚ್‌ನಿಂದ ತಿಂಗಳ ಪತ್ರಿಕೆಯಾಗಿ ಬಂದಿರುವುದನ್ನು ನೀವು ಗಮನಿಸಿರಬಹುದು. ಮಾರ್ಚ್‌ನಿಂದ ನಮ್ಮ ಪತ್ರಿಕೆ ಪ್ರತಿ ತಿಂಗಳೂ ಪ್ರಕಟವಾಗುವುದು. "ಮಾನವಿ", "ಮಾನಸ" ತಿಂಗಳ ಪತ್ರಿಕೆ ಎರಡೂ ಒಂದೇ ಪತ್ರಿಕೆಗಳು. ಮಾರ್ಚ್‌ನಿಂದ ತಿಂಗಳಲ್ಲಿ ನಿಮಗೆ ಪತ್ರಿಕೆ ತಲುಪದಿದ್ದರೆ, ಪತ್ರಿಸಿ ವಿಚಾರಿಸಿ.

.... ....  .... ....  .... ....  .... . ..

ಓದುಗರಲ್ಲಿ ಮನವಿ

ಶತಮಾನಗಳಿಂದ ತುಳಿತಕ್ಕೊಳಗಾದ ಸ್ತ್ರೀಯರ ಧ್ವನಿಯಾದ ಮಾನಸ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಪ್ರಾರಂಭಿಸಿದರೂ, ಆರ್ಥಿಕ ಕಾರಣಗಳಿಂದಾಗಿ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಲು ಸಾಧ್ಯವಾಗದೆ ಇರುವುದನ್ನು ನೀವು ಈಗಾಗಲೇ ಗಮನಿಸಿರಬಹುದು.

ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನವನ್ನೂ ಮೀರಿ ಅಡಿಗಡಿಗೆ ಎದುರಾಗುವ ಸಮಸ್ಯೆಯಿಂದಾಗಿ ಪತ್ರಿಕೆ ತುಂಬಾ ವಿಳಂಬ ಗತಿಯಲ್ಲಿ ಪ್ರಕಟವಾಗುತ್ತಿದೆ. ಪತ್ರಿಕೆಯ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದು ಪುಟ್ಟದಾದ ಅಚ್ಚುಮೊಳೆಯ ಕೇಂದ್ರವನ್ನು ಈಗಾಗಲೇ ಪ್ರಾರಂಭಿಸಿದ್ದೇವೆ. ಇದರ ಖರ್ಚು ವೆಚ್ಚಗಳೊಂದಿಗೆ ಬಾಡಿಗೆಗೆ ಹಣ ಹೊಂದಿಸುವುದು ದುಸ್ತರವಾಗುತ್ತಿದೆ. ಈ ಹಂತದಲ್ಲಿ ಪತ್ರಿಕೆಯ ಆತ್ಮೀಯ ಹಿತೈಷಿಗಳಾದ ನಿಮಗೆ ಈ ಕೆಳಗಿನ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇವೆ. ಪ್ರತಿ ತಿಂಗಳೂ ಮಾನಸ ಆಫೀಸ್ ಬಾಡಿಗೆಗೆಂದು ರೂ. 5-00 ಕಳಿಸಲು ಸಾಧ್ಯವೆ? ಪ್ರತಿ ತಿಂಗಳೂ ಕಳಿಸುವುದು ಸಮಸ್ಯೆಯೆನಿಸಿದರೆ, ಅರ್ಧ ವರ್ಷದ ಅಂದರೆ ರೂ. 30-00 ಅಥವಾ ಒಂದು ವರ್ಷದ ರೂ. 60-00 ಒಟ್ಟಿಗೆ ಕಳಿಸಬಹುದು. ನಮ್ಮ ಈ ಕಿರು ಪ್ರಯತ್ನಕ್ಕೆ ನಿಮ್ಮ ಬೆಂಬಲ ಮತ್ತು ಪ್ರೋತ್ಸಾಹವಿದೆಯೆಂಬ ಭರವಸೆ ನಮಗಿದೆ.

ಸಂ. ಮಂಡಳಿ.

ಮುದ್ರಕರು ಹಾಗೂ ಪ್ರಕಾಶಕರು ಎಚ್. ಎಸ್. ರಾಜೇಶ್ವರಿ, ಮಾನಸ ಮುದ್ರಣಾಲಯ

# ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ.

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ : "ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560067

ಸೂಚನೆ :
ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 250 ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್. ಎಂ. ಓ.
ಮೂಲಕ ಸ್ವೀಕರಿಸಲಾಗುವುದು.